ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magazine*

ಸಂಪುಟ 8 | ಸಂಚಿಕೆ 8 | ಆಗಸ್ಟ್ 2023



## ಪರಮಪೂಜ್ಯ ಜಗದ್ಗುರು
## ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ
## 108ನೆಯ ಜಯಂತಿ ಮಹೋತ್ಸವ

ಶ್ರೀಗಳವರ ವ್ಯಕ್ತಿತ್ವ ಅನನ್ಯವಾದುದು, ಅನುಪಮವಾದುದು. ಶ್ರೀಗಳವರು ಸಲ್ಲಿಸಿದ ಸಮಾಜೋಧಾರ್ಮಿಕ ಸೇವೆ ಆದರ್ಶವಾದುದು. ಶಿಕ್ಷಣ, ಸಾಹಿತ್ಯ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಹೊಸ ಹೊಸ ದಿಗಂತಗಳನ್ನೇ ಅನಾವರಣಗೊಳಿಸಿದರು. ಶ್ರೀಗಳವರದು ಮಾತೃಕರುಳು. ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಅವರು ಚಿಂತಿಸಿದ್ದು, ಶ್ರಮಿಸಿದ್ದು, ಸಾಧಿಸಿದ್ದು ಅಪಾರ.

– **ಪರಮಪೂಜ್ಯ ನಿ.ಪ್ರ.ಸ್ವ. ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳು**
**ಸಿದ್ಧಗಂಗಾ ಶ್ರೀಕ್ಷೇತ್ರ, ತುಮಕೂರು**
('ಘನಮನ' ಕೃತಿಯಿಂದ)



ಪರಮಪೂಜ್ಯ ಜಗದ್ಗುರುಗಳವರು ಅಯೋಧ್ಯೆಯ ರಾಮಲಲ್ಲಾ ದೇವರ ದರ್ಶನ ಮಾಡಿ ನಿರ್ಮಾಣವಾಗುತ್ತಿರುವ ಶ್ರೀರಾಮ ಮಂದಿರದ ಕಾಮಗಾರಿಯನ್ನು ವೀಕ್ಷಿಸಿದರು. ಉದ್ದಿಮೆದಾರರಾದ ಶ್ರೀ ಸೌರವ್ ಶರ್ಮಾ, ಶ್ರೀ ಎಸ್.ಪಿ. ಮಂಜುನಾಥ್, ವಿಹೆಚ್‌ಪಿ ಕೇಂದ್ರ ಸಮಿತಿಯ ಸಹ ಕಾರ್ಯದರ್ಶಿಗಳಾದ ಶ್ರೀ ಗೋಪಾಲ್ ಜೀ, ಇತರ ಶ್ರೀಗಳು, ಜೆಎಸ್‌ಎಸ್ ಸಂಸ್ಥೆಯ ಅಧಿಕಾರಿಗಳು ಹಾಗೂ ಸಿಬ್ಬಂದಿವರ್ಗದವರಿದ್ದಾರೆ (12 ಜುಲೈ 2023)



ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಕೇರಳದಲ್ಲಿ ನಡೆದ ಇಂಟರ್ ಡೈರೆಕ್ಟರೇಟ್ ಸ್ಪೋರ್ಟ್ಸ್ ಶೂಟಿಂಗ್ ಸ್ಪರ್ಧೆಯಲ್ಲಿ ವಿಜೇತರಾದ ಎನ್‌ಸಿಸಿ ಕೆಡೆಟ್‌ಗಳನ್ನು ಅಭಿನಂದಿಸಿದರು. ಸುಬೇದಾರ್ ಮೇಜರ್ ಶ್ರೀ ಗೋವಿಂದಪ್ಪ, ಪ್ರೊ. ಎಂ.ಪಿ. ವಿಜಯೇಂದ್ರಕುಮಾರ್, ಕರ್ನಲ್ ಶ್ರೀ ಮನೀಷ್ ಪ್ರಸಾದ್, ಪ್ರೊ. ಬಿ.ವಿ. ಸಾಂಬಶಿವಯ್ಯ ಹಾಗೂ ಲೆಫ್ಟಿನೆಂಟ್ ಡಾ. ಎಲ್. ವಿನಯ್‌ಕುಮಾರ್‌ರವರಿದ್ದಾರೆ (30 ಜುಲೈ 2023)

# ಭಕ್ತರ ಮನದಲ್ಲಿ ಘನವಾದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು



"ಲೋಕೋತ್ತರಣಾಂ ಚೇತಾಂಸಿ ಕೋ ಹಿ ವಿಜ್ಞಾತಮರ್ಹತಿ" ಈ ಮಾತು ಸುತ್ತೂರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಶ್ರೀ ಮನ್ಮಹಾರಾಜ 'ರಾಜಗುರುತಿಲಕ' ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ಅಕ್ಷರಶಃ ಅನ್ವಯವಾಗುತ್ತದೆ.

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಬಳಿವಿಡಿದು ಬಂದ ಗುರು ಪರಂಪರೆಯ 22ನೆಯ ಜಗದ್ಗುರುಗಳಾದ ಶ್ರೀ ಶಿವರಾತ್ರೀಶ್ವರಸ್ವಾಮಿಗಳವರ (ಮಂತ್ರ ಮಹರ್ಷಿಗಳು) ಕರಕಮಲ ಸಂಜಾತರಾದ ಮಹಾಚೇತನ ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳು.

ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿ ಪಡೆದಿರುವ ನಂಜನಗೂಡು ಸಮೀಪದ ಕಪಿಲಾ ನದಿ ತೀರದಲ್ಲಿರುವ ಸುತ್ತೂರಿನಲ್ಲಿ ಶ್ರೀ ಶಿವರಾತ್ರೀಶ್ವರರ ಸಂಕಲ್ಪದಂತೆ 29.8.1916 ರ ಶಾಲಿವಾಹನ ಶಕ 1838ನೇ ನಳನಾಮ ಸಂವತ್ಸರದ ಭಾದ್ರಪದ ಶುಕ್ಲದಲ್ಲಿ ಶ್ರೀಮತಿ ಮರಮ್ಮಣ್ಣಿ ಮತ್ತು ಶ್ರೀ ಮಲ್ಲಿಕಾರ್ಜುನಸ್ವಾಮಿ ದಂಪತಿಗಳ ಕಾರಣಿಕ ಮಗುವಾಗಿ ಶ್ರೀಗಳು ಜನಿಸಿದರು. ಪೂಜ್ಯರ ಪೂರ್ವಾಶ್ರಮದ ಹೆಸರು ಶಿವರಾತ್ರಿ ರಾಜೇಂದ್ರ ಎಂದೇ ಇರುವುದು ವಿಶೇಷವಾದುದು. ಶಿವರಾತ್ರಿ ರಾಜೇಂದ್ರರು ಹುಟ್ಟುವುದಕ್ಕೆ ಮೊದಲೆ ಸ್ವಾಮಿಗಳಾಗಿ ಮೂಡಿಬಂದವರು.

ಶಿವರಾತ್ರಿ ರಾಜೇಂದ್ರರಿಗೆ ಕೇವಲ ಹನ್ನೆರಡು ವರ್ಷವಿದ್ದಾಗಲೇ 24.2.1928ರಲ್ಲಿ ಪಟ್ಟಾಭಿಷೇಕ ಮಾಡಿ ಮೈಸೂರಿನಲ್ಲಿ ವಿದ್ಯಾಭ್ಯಾಸ ಮುಂದುವರೆಸುವ ವ್ಯವಸ್ಥೆ ಮಾಡಲಾಯಿತು. ಬಾಲಕ ಶಿವರಾತ್ರಿ ರಾಜೇಂದ್ರರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಾಗಿದ್ದರು. ಅವರು ಓದುವಾಗಲೆ ಗ್ರಾಮಾಂತರ ಬಡವಿದ್ಯಾರ್ಥಿಗಳ ಕಷ್ಟ ನೋಡಿ ತಮ್ಮ ಖರ್ಚಿಗೆ ಕೊಟ್ಟ ಕಾಸನ್ನೆ ಉಳಿಸಿ ಬಡವಿದ್ಯಾರ್ಥಿಗಳಿಗೆ ನೆರವಾಗುತ್ತಿದ್ದರು. ಆ ವಯಸ್ಸಿನಲ್ಲಿಯೇ ಬಡವರ ಮಕ್ಕಳಿಗೆ ಉಚಿತ ವಿದ್ಯಾರ್ಥಿನಿಲಯ ಪ್ರಾರಂಭಿಸುವ ಬಯಕೆಯನ್ನು ವ್ಯಕ್ತಪಡಿಸಿದ್ದರು. ಪೂಜ್ಯರ ಅಭಿಲಾಷೆಯಂತೆ 19.9.1941ರಲ್ಲಿ ಶ್ರೀಮಠದ ಆಶ್ರಯದಲ್ಲಿ ವಿದ್ಯಾರ್ಥಿನಿಲಯ ಪ್ರಾರಂಭವಾಯಿತು.

ಪೂಜ್ಯರ ಲೋಕಹಿತ ಕಾರ್ಯಗಳು ಮೈಸೂರು ಮಹಾರಾಜರನ್ನೂ ಆಕರ್ಷಿಸಿದವು. ಸಂಸ್ಥೆಯ ಆಶ್ರಯದ ನೂರಾರು ಶಿಕ್ಷಣ ಸಂಸ್ಥೆಗಳನ್ನು ಒಗ್ಗೂಡಿಸಿ 1954 ರಲ್ಲಿ "ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ" ವನ್ನು ಸ್ಥಾಪಿಸಿದರು. ವಿದ್ಯಾಪೀಠ ಸ್ಥಾಪಿತವಾದ ಮೇಲೆ ಅದು ತನ್ನ ವ್ಯಾಪ್ತಿಯನ್ನು ನಿರಂತರವಾಗಿ ಹೆಚ್ಚಿಸಿಕೊಂಡು ಮುನ್ನಡೆಯಿತು. ಇದರ ಅಡಿಯಲ್ಲಿ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಶರಣ ಸಾಹಿತ್ಯ ಸಂಶೋಧನ ಕೇಂದ್ರ, ಬಡವರ ಆರೋಗ್ಯಕ್ಕಾಗಿ ಜೆಎಸ್‌ಎಸ್ ಆಸ್ಪತ್ರೆ, ಕಲಾ ಪ್ರಚಾರಕ್ಕಾಗಿ ಜೆಎಸ್‌ಎಸ್ ಕಲಾಮಂಟಪ, ಶಾಸ್ತ್ರೀಯ ಸಂಗೀತ ಪ್ರೋತ್ಸಾಹಕ್ಕೋಸ್ಕರ ಜೆಎಸ್‌ಎಸ್ ಸಂಗೀತ ಸಭಾ, ದುಡಿಯುವವರ ಕಲ್ಯಾಣಕ್ಕಾಗಿ ಜೆಎಸ್‌ಎಸ್ ಕನ್ಸ್ಯೂಮರ್ ಕೊ ಆಪರೇಟಿವ್ ಸೊಸೈಟಿ ಇನ್ನೂ ಹಲವು ಕಾರ್ಯಗಳು ಜಗದ್ಗುರುಗಳ ಪರಿಪೂರ್ಣ ಜೀವನದೃಷ್ಟಿಗೆ ಹೆಗ್ಗುರುತುಗಳಾಗಿವೆ.

ಪ್ರಾತಃಸ್ಮರಣೀಯರಾದ ರಾಜೇಂದ್ರ ಶ್ರೀಗಳ ನೆನಪು ಇಂದಿಗೂ ಭಕ್ತರಲ್ಲಿ ಕರ್ತೃತ್ವ ಶಕ್ತಿಯನ್ನು ಮೂಡಿಸುತ್ತದೆ. ಆಗಸ್ಟ್ 29 ರಂದು ಪೂಜ್ಯ ಶಿವರಾತ್ರಿ ರಾಜೇಂದ್ರ ಶ್ರೀಗಳ 108ನೆಯ ಜಯಂತಿಯ ಶುಭ ಸಂದರ್ಭದಲ್ಲಿ ದಿವ್ಯ ಚೇತನವನ್ನು ನೆನೆದು ಅವರು ಹಾಕಿಕೊಟ್ಟ ಆದರ್ಶದ ಹಾದಿಯಲ್ಲಿ ಮುನ್ನಡೆಯಲು ನಾವೆಲ್ಲರೂ ಪ್ರತಿಜ್ಞೆ ಮಾಡೋಣ.

## ಉಚಿತ ಶ್ರವಣಯಂತ್ರ ವಿತರಣಾ ಶಿಬಿರ



ಧಾರವಾಡದ ಜೆಎಸ್‌ಎಸ್ ವಾಕ್ ಶ್ರವಣ ಸಂಸ್ಥೆಯಲ್ಲಿ ಅಲಿಯಾವರ್ ಜಂಗ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ (ದಿವ್ಯಾಂಗನ್) ಸಹಯೋಗದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರವಣದೋಷವುಳ್ಳ ಮಕ್ಕಳಿಗೆ ಉಚಿತ ಶ್ರವಣಯಂತ್ರಗಳನ್ನು ವಿತರಿಸಲಾಯಿತು.

**ಧಾರವಾಡದ ಜೆಎಸ್‌ಎಸ್ ವಾಕ್ ಶ್ರವಣ ಸಂಸ್ಥೆಯಲ್ಲಿ** ದಿನಾಂಕ 3.7.2023ರಂದು ಅಲಿಯಾವರ್ ಜಂಗ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ (ದಿವ್ಯಾಂಗನ್) ಸಹಯೋಗದಲ್ಲಿ ಉಚಿತ ಶ್ರವಣಯಂತ್ರ ವಿತರಣಾ ಶಿಬಿರವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಜೆಎಸ್‌ಎಸ್ ವಾಕ್ ಶ್ರವಣ ಸಂಸ್ಥೆ ಕ್ಯಾಂಪಸ್‌ನಲ್ಲಿ ಮೂರು ದಿನಗಳು ಮತ್ತು ಲಕ್ಷ್ಮೇಶ್ವರದ ಬಿ.ಡಿ. ಥಟ್ಟಿ ಕಿವುಡು ಮಕ್ಕಳ ಶಾಲೆಯಲ್ಲಿ ಒಂದು ದಿನ ಈ ಶಿಬಿರ ನಡೆಯಿತು. ಸುಮಾರು 150 ಶ್ರವಣದೋಷವುಳ್ಳ ಮಕ್ಕಳು ಮತ್ತು ವೃದ್ಧರು ಶಿಬಿರದಲ್ಲಿ ಹೆಸರು ನೋಂದಾಯಿಸಿಕೊಂಡಿದ್ದರು. ಫಲಾನುಭವಿಗಳಿಗೆ ಉಚಿತ ಶ್ರವಣ ಯಂತ್ರಗಳನ್ನು ವಿತರಿಸಲಾಯಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ನಿರ್ದೇಶಕರಾದ ಶ್ರೀ ಆರ್. ಮಹೇಶ್, ಶ್ರೀ ಸುರೇಶ್‌ಬಾಬು, ಶ್ರೀ ಎಸ್.ಜಿ. ಬಿರಾದಾರ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಾದ ಡಾ. ಕೆ. ಜಗದೀಶ, ಶ್ರೀ ಗೋಪಾಲ ಶರ್ಮಾ, ಶ್ರೀ ಸಂಜಯ ಖಂಡಗಾಲೆ ಮತ್ತು ಇಂಟರ್ನ್‌ಶಿಪ್ ವಿದ್ಯಾರ್ಥಿಗಳು ಮತ್ತು ಡಾ. ಪಿ.ಎಂ. ಜಿಜೋ ಉಪಸ್ಥಿತರಿದ್ದರು.

ಸಕಲ ಜೀವಾತ್ಮರಿಗೆ ಲೇಸನೇ ಬಯಸುತ್ತ
ಸಕಲ ಚೇತನಗಳಲಿ ಶಿವನ ಅರಸುತ್ತ
ಅವರ ಕೈಂಕರ್ಯದಲಿ ತೃಪ್ತಿ ತಾ ಪಡೆಯುತ್ತ
ದುಡಿಮೆಯಲಿ ದೇವನನು ಕಾಣಿಸುತ್ತಾ
ಶುಕನಾದೆ ಶಿವಗುರುವೆ ಶಿವರಾತ್ರಿ ರಾಜೇಂದ್ರ
ಶಿವನ ಚೆಂಬೆಳಕಲ್ಲಿ ಶಿವನೆ ನೀನಾದೆ

**– ಮರುಳಯ್ಯ, ಸಾ.ಶಿ.**

## ವೈದ್ಯರ ದಿನಾಚರಣೆ

**ಮೈಸೂರಿನ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದಲ್ಲಿ** ದಿನಾಂಕ 1.7.2023ರಂದು ಡಾ. ಬಿ.ಸಿ. ರಾಯ್‌ರವರ ನೆನಪಿನಲ್ಲಿ ವೈದ್ಯರ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಸಮಾರಂಭಕ್ಕೆ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಆಯುರ್ವೇದ ವೈದ್ಯರಾದ ಡಾ. ಮಾಧವ ದಿಗ್ಗಾವಿ ಆಚಾರ್ಯರವರು ಮಾತನಾಡುತ್ತಾ ಭಾರತೀಯ ವೈದ್ಯಪದ್ಧತಿಗಳು ಪುರಾತನವಾದರೂ ಇಂದಿನ ಕಾಲಘಟ್ಟಕ್ಕೆ ಅನುಗುಣವಾದ ಸಂಶೋಧನಾತ್ಮಕ ದೃಷ್ಟಿಕೋನದಿಂದ ಅಭ್ಯಸಿಸುವುದು ಹಾಗೂ ಚಿಕಿತ್ಸಿಸುವುದು ಅಗತ್ಯವಾಗಿದೆ. ಆಯುರ್ವೇದ ಅಧ್ಯಯನ ಹಾಗೂ ಚಿಕಿತ್ಸೆಗಳು ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಹಾಗೂ ಜನಸಾಮಾನ್ಯರಲ್ಲಿ ಆಯ್ಕೆ ವಿಷಯವಾಗುತ್ತಿರುವುದು ಸಂತೋಷದ ವಿಷಯ. ಆಯುರ್ವೇದ ಸಾರವನ್ನು ಪ್ರಪಂಚದಾದ್ಯಂತ ಪಸರಿಸಲು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಸರ್ಕಾರದ ಭಾಗಿಯಲ್ಲಿ, ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಹೆಚ್ಚು ಸಂಶೋಧನೆಗಳನ್ನು ಪದವಿ, ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರುಗಳು ಕೈಗೊಳ್ಳಬೇಕೆಂದು ತಿಳಿಸಿದರು.

ಹೆಸರಾಂತ ಹೃದ್ರೋಗ ತಜ್ಞರಾದ ಡಾ. ಎಂ. ಮಂಜಪ್ಪನವರು ಮಾತನಾಡುತ್ತಾ ವೈದ್ಯ ವೃತ್ತಿಗೆ ಒಂದು ಘನತೆಯನ್ನು ತಂದುಕೊಟ್ಟ ಡಾ. ಬಿ.ಸಿ. ರಾಯ್ ಅವರ ಸೇವೆಯನ್ನು ಪರಿಗಣಿಸಿದ ಸರ್ಕಾರ ಅವರ ಜನ್ಮ ದಿನವಾದ ಜುಲೈ ಒಂದನ್ನು, ವೈದ್ಯರ ದಿನವನ್ನಾಗಿ ಆಚರಿಸುವ ಮೂಲಕ ಸದಾ ನೆನೆಯುವಂತೆ ಮಾಡುತ್ತಿದೆ. ಸಮಾಜದಲ್ಲಿ ವೈದ್ಯ ವಿದ್ಯಾರ್ಥಿಗಳು ಹಾಗೂ ವೈದ್ಯರ ಜವಾಬ್ದಾರಿ ಹೆಚ್ಚಿನದು. ಜನಸಾಮಾನ್ಯರಲ್ಲಿ ಆರೋಗ್ಯದ ಅರಿವು ಇರಬೇಕು. ರೋಗಿಗಳಿಗೆ ಗುಣ ಮಟ್ಟದ ಚಿಕಿತ್ಸೆಯ ಅವಶ್ಯಕತೆಯಿದೆ ಎಂದು ತಿಳಿಸಿದರು.

ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರುಗಳೆಲ್ಲರೂ ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನೆಯಲ್ಲಿ ನಿರತರಾಗುವುದಲ್ಲದೆ, ರೋಗಿಗಳ ಚಿಕಿತ್ಸೆಯಲ್ಲಿ ಸಂಯೋಜಿತ ವೈದ್ಯಪದ್ಧತಿಯನ್ನು ಉಪಯೋಗಿಸಿಕೊಳ್ಳುವುದರ ಮೂಲಕ ಹೆಚ್ಚಿನ ಸೇವಾ ಮನೋಭಾವನೆಯಿಂದ ಕರ್ತವ್ಯ ತತ್ಪರರಾಗಬೇಕೆಂದು ಹೇಳಿದರು.

ಪ್ರಾಂಶುಪಾಲರಾದ ಡಾ. ಸರ್‌ಬೇಶ್ವರ್‌ಕರ್ ಅಧ್ಯಕ್ಷತೆಯನ್ನು ವಹಿಸಿದ್ದರು. ಕು. ರಶ್ಮಿ ಮತ್ತು ವೃಂದದವರು ಪ್ರಾರ್ಥನೆ ಮಾಡಿದರು. ಡಾ. ರಾಜೇಶ್ ಅ. ಉದಪುಡಿ ಸ್ವಾಗತಿಸಿದರು. ಡಾ. ಬಿ.ಜಿ. ಮಧುಸೂದನ್ ಹಾಗೂ ಡಾ. ಪಿ.ಪಿ. ಅಯ್ಯಣ್ಣರವರು ಪ್ರಶಸ್ತಿ ಪತ್ರಗಳನ್ನು ವಾಚಿಸಿದರು. ಡಾ. ಎಂ.ಡಿ. ಬೀನಾ ವಂದಿಸಿದರು. ಡಾ. ಡಿ. ಸಂಧ್ಯಾರಾಣಿ ಕಾರ್ಯಕ್ರಮ ನಿರೂಪಿಸಿದರು.

## ಗುರು ಪೂರ್ಣಿಮೆ

**ಮೈಸೂರಿನ ಮಹದೇವಪುರದ ಜೆಎಸ್‌ಎಸ್ ಶಿಶುನಾಳ ಶರೀಫ್ ಪ್ರೌಢಶಾಲೆಯಲ್ಲಿ** ದಿನಾಂಕ 3.7.2023ರಂದು ಪದವಿಪೂರ್ವ ಕಾಲೇಜು ಸಹಯೋಗದೊಂದಿಗೆ ಗುರು ಪೂರ್ಣಿಮೆ ಹಾಗು ವಿದ್ಯಾರ್ಥಿಸಂಘದ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿದ್ದ ಶ್ರೀ ಹೆಚ್.ವಿ. ಶೇಷಗಿರಿರಾವ್‌ರವರು ಮಾತನಾಡಿ ಸುತ್ತೂರು ಶ್ರೀ ಮಠದ ಸೇವಾ ಕೈಂಕಾರ್ಯ ಅಪಾರವಾದುದು. ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಹಾಗು ಜಗದ್ಗುರು ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳವರ ಕೊಡುಗೆ ಸ್ಮರಣೀಯ ಎಂದು ವಿವರಿಸಿದರು.

ಮುಖ್ಯೋಪಾಧ್ಯಾಯರಾದ ಶ್ರೀ ಎಸ್.ಬಿ. ರಾಜು, ಪ್ರಾಂಶುಪಾಲರಾದ ಶ್ರೀ ಜ್ಞಾನಮೂರ್ತಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕು. ಹೆಚ್.ಕೆ. ನಿತ್ಯ ನಿರೂಪಿಸಿದರು. ಕು. ರಂಜಿತ ಮತ್ತು ತಂಡದವರು ಪ್ರಾರ್ಥನೆ ಮಾಡಿದರು. ಕು. ನಿಸರ್ಗ ಸ್ವಾಗತಿಸಿದರು ಹಾಗು ಕು. ಮೆಹರ್ ವಂದಿಸಿದರು.

# ಶುಶ್ರೂಷಕರ ಸೇವೆ, ಸಹನೆ, ತಾಳ್ಮೆ ಹಾಗು ತ್ಯಾಗ ಪ್ರಶಂಸನೀಯ



ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನ 35ನೇ ಸಾಲಿನ ಜಿಎನ್‌ಎಂ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಜ್ಯೋತಿ ಬೆಳಗುವಿಕೆ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭವನ್ನು ಮೇಯರ್ ಶ್ರೀ ಶಿವಕುಮಾರ್‌ರವರು ಉದ್ಘಾಟಿಸಿದರು.

ಶುಶ್ರೂಷಕರ ಸೇವೆ, ಸಹನೆ, ತಾಳ್ಮೆ ಹಾಗು ತ್ಯಾಗ ಪ್ರಶಂಸನೀಯ ಎಂದು ಮೈಸೂರು ಮಹಾನಗರ ಪಾಲಿಕೆಯ ಮಹಾಪೌರರಾದ ಶ್ರೀ ಶಿವಕುಮಾರ್‌ರವರು ಹೇಳಿದರು.

**ಮೈಸೂರಿನ ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನಲ್ಲಿ** ದಿನಾಂಕ 5.7.2023ರಂದು ಹಮ್ಮಿಕೊಂಡಿದ್ದ 35ನೇ ಸಾಲಿನ ವಿದ್ಯಾರ್ಥಿಗಳಿಗೆ ಜ್ಯೋತಿ ಬೆಳಗುವಿಕೆ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭದಲ್ಲಿ ಮಾತನಾಡಿದ ಅವರು ನರ್ಸಿಂಗ್ ವೃತ್ತಿಯು ಮೌಲ್ಯಾಧಾರಿತ ವೃತ್ತಿಯಾಗಿದೆ. ಅವರ ಸೇವೆಗೆ ಇಡೀ ವಿಶ್ವದಾದ್ಯಂತ ಪ್ರಶಂಸೆ ಇದೆ. ಕೋವಿಡ್-19ರ ಸಮಯದಲ್ಲಿ ಶುಶ್ರೂಷಕರ ಸೇವೆ ಪ್ರಶಂಸನೀಯವಾದುದು. ಕೆಲಸದಲ್ಲಿ ತಾರತಮ್ಯ ತೋರದೆ ಪ್ರತಿಯೊಬ್ಬರಿಗೂ ಉತ್ತಮ ಆರೋಗ್ಯ ಸೇವೆ ನೀಡಬೇಕು ಎಂದು ತಿಳಿಸಿದರು.

ಬೆಂಗಳೂರಿನ ಪ್ರಸಿದ್ಧ ಫೋರ್ಟಿಸ್ ಆಸ್ಪತ್ರೆಯ ಶುಶ್ರೂಷ ಸೇವೆಯ ಮುಖ್ಯಸ್ಥರಾದ ಶ್ರೀಮತಿ ಲತಾನೋನಿಸ್‌ರವರು ನರ್ಸಿಂಗ್ ವೃತ್ತಿಗೆ ಜೆಎಸ್‌ಎಸ್ ಸಂಸ್ಥೆಯನ್ನು ಆಯ್ಕೆ ಮಾಡಿಕೊಂಡಿರುವುದಕ್ಕೆ ನಿಮಗೆ ಅಭಿನಂದನೆಗಳು. ನರ್ಸಿಂಗ್ ಕ್ಷೇತ್ರದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಉದ್ಯೋಗ ಸೃಷ್ಟಿಯಾಗುತ್ತಿದ್ದು, ನರ್ಸಿಂಗ್ ಶಿಕ್ಷಣ ಪಡೆದವರಿಗೆ ಉತ್ತಮ ಭವಿಷ್ಯವಿದೆ. ವಿದ್ಯಾರ್ಥಿಗಳು ಕೌಶಲ್ಯ ವೃದ್ಧಿಸಿಕೊಂಡು ನರ್ಸಿಂಗ್ ಕ್ಷೇತ್ರದಲ್ಲಿ ಉತ್ತಮ ಹುದ್ದೆಗಳನ್ನು ಪಡೆಯಬೇಕು. ನರ್ಸ್‌ಗಳ ವೃತ್ತಿ ಜೀವನದ ಹಾದಿ ಸುಲಭವಾಗಿ ಇರುವುದಿಲ್ಲ. ಹಲವಾರು ಸವಾಲುಗಳಿಂದ ಕೂಡಿರುತ್ತದೆ. ಎಲ್ಲ ಸವಾಲುಗಳನ್ನು ಮೆಟ್ಟಿನಿಂತು ರೋಗಿಗಳಿಗೆ ಉತ್ತಮ ಆರೋಗ್ಯ ಸೇವೆ ನೀಡಲು ನರ್ಸ್‌ಗಳು ಸದಾ ಮುಂದೆ ಇರಬೇಕು ಎಂದು ಹೇಳಿದರು.

ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಸಿ.ಪಿ. ಮಧುರವರು ರೋಗಿಗಳು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ಮೇಲೆ ಶುಶ್ರೂಷಕರ ಬಗ್ಗೆ ಉತ್ತಮವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದರಲ್ಲಿಯೇ ನಿಮ್ಮ ಸೇವೆಗೆ ಮಹತ್ವಪೂರ್ಣ ಅರ್ಥವಿದೆ. ರೋಗಿಗಳ ಸೇವೆಯಲ್ಲಿ ವೈದ್ಯರಿಗಿಂತ ಶುಶ್ರೂಷ ಸೇವೆಯ ಪಾಲು ಹೆಚ್ಚು. ವಿದ್ಯಾರ್ಥಿಗಳು ಸಮಯ ಪಾಲನೆ ಮತ್ತು ಶಿಸ್ತಿನ ಜೀವನವನ್ನು ರೂಢಿಸಿಕೊಳ್ಳಬೇಕು ಎಂದು ಹೇಳಿದರು.

ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು, ಜೆಎಸ್‌ಎಸ್ ಆಸ್ಪತ್ರೆಯ ಶುಶ್ರೂಷ ಸೇವೆಗಳ ಮುಖ್ಯಾಧಿಕಾರಿಗಳಾದ ಶ್ರೀಮತಿ ಜೆನೆಟ್ ಮತಾಯಸ್‌ರವರು ಮಾತನಾಡಿದರು. ಪ್ರಥಮ ವರ್ಷದ ವಿದ್ಯಾರ್ಥಿ ಶ್ರೀ ಗುರುಪ್ರಸಾದ್‌ರವರು ಹಾಗು ತೃತೀಯ ವರ್ಷದ ವಿದ್ಯಾರ್ಥಿನಿ ಕು. ಟೆನ್ಜಿನ್ ಸುಮೋರವರು ಅನಿಸಿಕೆಯನ್ನು ಹಂಚಿಕೊಂಡರು. ಶ್ರೀಮತಿ ಹೆಚ್.ಎಸ್. ಮಾನಸ ಸ್ವಾಗತಿಸಿದರು. ಶ್ರೀಮತಿ ವಿ. ಸುಕನ್ಯರವರು ಬಹುಮಾನ ವಿತರಣಾ ವರದಿಯನ್ನು ಮಂಡಿಸಿದರು. ಶ್ರೀ ಆರ್.ಕೆ. ಮಹದೇವಸ್ವಾಮಿ ವಂದಿಸಿದರು. ಶ್ರೀಮತಿ ಎಸ್. ನೀತದಲ್ವಿ ಕಾರ್ಯಕ್ರಮ ನಿರೂಪಿಸಿದರು. □

## ಜಿ–20 ಶೃಂಗಸಭೆ ಕುರಿತು ಉಪನ್ಯಾಸ



ಅತ್ಯಂತ ದೊಡ್ಡ ಮತ್ತು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯುಳ್ಳ ದೇಶಗಳ ಮುಖಂಡರು ನಡೆಸುವ ಶೃಂಗಸಭೆ ಜಿ–20. ಇದರ ಸದಸ್ಯ ದೇಶಗಳು ಜಿಡಿಪಿಯ ಶೇ 85ರಷ್ಟು ಮತ್ತು ಜನಸಂಖ್ಯೆಯ ಮೂರನೇ ಎರಡು ಭಾಗದಷ್ಟು ಹೊಂದಿವೆ ಎಂದು ಕಲಾ ಶಿಕ್ಷಕರಾದ ಶ್ರೀ ಎಸ್. ಮಹೇಶ್‌ರವರು ಹೇಳಿದರು.

ಅಂತಾರಾಷ್ಟ್ರೀಯ ಮಟ್ಟದ ಈ ಜಿ–20 ಕಾರ್ಯಕ್ರಮದ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ದಿನಾಂಕ 28.6.2023ರಂದು **ಲಕ್ಷ್ಮೀಪುರಂ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ಏರ್ಪಡಿಸಿದ್ದ ಉಪನ್ಯಾಸದಲ್ಲಿ ಮಾತನಾಡುತ್ತಾ ಈ ಬಾರಿಯ ಜಿ–20 ರಾಷ್ಟ್ರಗಳ ನೇತೃತ್ವವು ಭಾರತಕ್ಕೆ ಲಭಿಸಿದ್ದು, ಅಧ್ಯಕ್ಷತೆಯನ್ನು ದೇಶದ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ವಹಿಸಿಕೊಳ್ಳಲಿದ್ದಾರೆ. ಈ ಬಾರಿ ಭಾರತವು ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ ಎಂಬುದನ್ನು ಈ ಶೃಂಗಸಭೆಯ ಧ್ಯೇಯ ವಾಕ್ಯವನ್ನಾಗಿಸಿದೆ. ಈ ಶೃಂಗಸಭೆಯಲ್ಲಿ ಜಾಗತಿಕ ಆರ್ಥಿಕತೆ ಮತ್ತು ಅಪಾಯಗಳಿಗೆ ಸಂಬಂಧಿಸಿದ ವಿಷಯಗಳು ಸೇರಿದಂತೆ ಅನೇಕ ಪ್ರಮುಖ ವಿಷಯಗಳು ಚರ್ಚೆಯಾಗುತ್ತವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರು, ಸಿಬ್ಬಂದಿವರ್ಗದವರು ಹಾಜರಿದ್ದರು.

## ಅಂತಾರಾಷ್ಟ್ರೀಯ ಆರ್ಥಿಕ ಸಹಕಾರಕ್ಕಾಗಿ ಜಿ–20 ಸ್ಥಾಪನೆ

**ಕೊಳ್ಳೇಗಾಲದ ಜೆಎಸ್‌ಎಸ್ ಕಾಲೇಜಿನಲ್ಲಿ** ದಿನಾಂಕ 4.7.2023ರಂದು ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಘಟಕ ಹಾಗೂ ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಜಿ–20 ಮತ್ತು ಭಾರತದ ವಿದೇಶಾಂಗ ನೀತಿಯ ಬಗ್ಗೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮಂಡ್ಯ ವಿವಿಯ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಹೆಚ್.ಎನ್. ಸತೀಶ್‌ರವರು ಉಪನ್ಯಾಸ ನೀಡುತ್ತಾ ರಾಷ್ಟ್ರದ ರಾಜಕೀಯ ಮುಖ್ಯಸ್ಥರ ವಿದೇಶಿ ಪ್ರವಾಸ ಜಾಗತಿಕವಾಗಿ ರಾಷ್ಟ್ರ ರಾಷ್ಟ್ರಗಳ ನಡುವಿನ ಸಂಬಂಧ ಅಭಿವೃದ್ಧಿಗೆ ಪೂರಕವಾಗಿರುತ್ತದೆ. ಜಾಗತಿಕ ಆರ್ಥಿಕ ಸಹಕಾರ ಮತ್ತು ವಿದೇಶಿ ಹೂಡಿಕೆಗಾಗಿ ಜಿ–20 ಸಮಾವೇಶ ಆಯೋಜನೆ ಸಹಕಾರಿಯಾಗುತ್ತದೆ. ಪ್ರಸ್ತುತ ಭಾರತ ಜಿ–20 ಅಧ್ಯಕ್ಷತೆ ವಹಿಸಿಕೊಂಡು ಜಾಗತಿಕ ನಾಯಕತ್ವದ ಗುಣಗಳನ್ನು ಪ್ರತಿಬಿಂಬಿಸುತ್ತಿದೆ. ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ ಎಂಬ ಧ್ಯೇಯದೊಂದಿಗೆ ಜಿ–20 ಕಾರ್ಯಸೂಚಿಯನ್ನು ಭಾರತ ಮುನ್ನಡೆಸುತ್ತಿದೆ. ಭಾರತ ಅಂತಾರಾಷ್ಟ್ರೀಯ ಮಟ್ಟದಲ್ಲಿ ಜಾಗತಿಕ ಸ್ಥಾನಮಾನ ಪಡೆಯಲು ತನ್ನ ಉತ್ತಮ ವಿದೇಶಾಂಗ ನೀತಿಯೇ ಕಾರಣವಾಗಿದೆ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ಜಿ–20 ಕೇವಲ ಆರ್ಥಿಕ ಸಹಕಾರಕ್ಕೆ ಸೀಮಿತಗೊಳ್ಳದೆ ಸುಸ್ಥಿರ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿದೆ ಹಾಗೂ ಉತ್ತಮ ವಿದೇಶಾಂಗ ನೀತಿಯು ಆ ದೇಶದ ಪ್ರಗತಿಗೆ ಪೂರಕವಾಗಿರುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಚಾಲಕರಾದ ಪ್ರೊ. ಹೆಚ್.ಜಿ. ನಟರಾಜನ್, ಸಿಇಟಿ ಸೆಲ್ ಸಂಚಾಲಕರಾದ ಶ್ರೀ ಮಹದೇವಸ್ವಾಮಿ, ಸಹಾಯಕ ಆಡಳಿತಾಧಿಕಾರಿಗಳಾದ ಶ್ರೀ ಗಿರೀಶ್ ಹಾಗೂ ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಜಿ.ಎಸ್. ಸುಮರವರು ಉಪಸ್ಥಿತರಿದ್ದರು.



ಅಮೆರಿಕದ ಗ್ಲೋಬಲ್ ಸಿ.ಪಿ.ಎ ಅಸೋಸಿಯೇಷನ್ನಿನ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಅನೂಪ್ ಮೆಹ್ತಾರವರು ಸುತ್ತೂರಿನ ಜೆಎಸ್‌ಎಸ್ ಉಚಿತ ವಸತಿ ಶಾಲಾ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿ ಸಂವಾದ ನಡೆಸಿದರು.

# ಶಾಲಾ ವಿದ್ಯಾರ್ಥಿ ಸಂಘ ಉದ್ಘಾಟನೆ



ಸುತ್ತೂರು ಶ್ರೀಕ್ಷೇತ್ರದ ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿ ಸಂಘವನ್ನು ಮೈಸೂರು ತಾಲ್ಲೂಕಿನ ತಹಶೀಲ್ದಾರರಾದ ಶ್ರೀ ಬಿ.ಎನ್. ಗಿರೀಶ್‌ರವರು ಉದ್ಘಾಟಿಸಿ ಮಾತನಾಡಿದರು.

**ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ** ವಿದ್ಯಾರ್ಥಿ ಸಂಘದ ಈ ಸಾಲಿನ ಚಟುವಟಿಕೆಗಳಿಗೆ 15.7.2023ರಂದು ಚಾಲನೆ ನೀಡಲಾಯಿತು. ವಿದ್ಯಾರ್ಥಿ ಸಂಘವನ್ನು ಉದ್ಘಾಟಿಸಿ ಮಾತನಾಡಿದ ಮೈಸೂರು ತಾಲ್ಲೂಕು ತಹಶೀಲ್ದಾರಾದ ಶ್ರೀ ಬಿ.ಎನ್. ಗಿರೀಶ್‌ರವರು ವಿದ್ಯಾರ್ಥಿಗಳು ಜೀವನದಲ್ಲಿ ಮಾನವೀಯತೆಯನ್ನು ಬೆಳೆಸಿಕೊಳ್ಳಬೇಕು, ಏನಾದರೂ ಆಗು ಮೊದಲು ಮಾನವನಾಗು. ಗುರಿ, ಉದ್ದೇಶ ಸ್ಪಷ್ಟವಾಗಿದ್ದರೆ ಉತ್ತಮ ಸ್ಥಾನಗಳನ್ನು ಅಲಂಕರಿಸಬಹುದು. ಹಳ್ಳಿಯಿಂದ ಬಂದ ವಿದ್ಯಾರ್ಥಿಗಳು ಬುದ್ಧಿವಂತರು ಹಾಗೂ ಸೃಜನಶೀಲರಾಗಿರುತ್ತಾರೆ. ನಾವು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗದೆ, ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕು. ಹಳ್ಳಿಯ ಜನಪದ ಸೊಗಡನ್ನು ಮರೆಯದೇ ಜೀವಂತವಾಗಿರಿಸಬೇಕು. ನಾನು ಸಹ ಜೆಎಸ್‌ಎಸ್ ಸಂಸ್ಥೆಯಲ್ಲಿ ಓದಿ ತಹಶೀಲ್ದಾರನಾದೆ, ಹಾಗೆಯೆ ನೀವು ಜಿಲ್ಲಾಧಿಕಾರಿಗಳು ಹಾಗೂ ಮತ್ತಿತರ ಉನ್ನತ ಹುದ್ದೆ ಗಳಿಸುವ ಮೂಲಕ ಸಮಾಜ ಸೇವೆಗೆ ಸಿದ್ಧರಾಗಿ ಎಂದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಬಯೋಟೆಕ್ನಾಲಜಿ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಎಸ್. ನಂಜುಂಡಸ್ವಾಮಿರವರು, ವಿದ್ಯಾರ್ಥಿ ಜೀವನದಲ್ಲಿ ವಿವಿಧ ವಿದ್ಯಾರ್ಥಿಸಂಘಗಳು ಪ್ರಮುಖ ಪಾತ್ರವಹಿಸುತ್ತವೆ. ಸರ್ವಜ್ಞನೇ ತಿಳಿಸಿದಂತೆ ಸರ್ವರಿಂದಲೂ ವಿದ್ಯೆ ಕಲಿತು ಸರ್ವಜ್ಞನಾಗಿದ್ದಾನೆ. ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಶಿಕ್ಷಣವು ಅತ್ಯಂತ ಅವಶ್ಯಕವಾಗಿರುತ್ತದೆ. ಶಿಕ್ಷಣವು ವಿದ್ಯಾರ್ಥಿಗಳ ಜೀವನದ ಭದ್ರ ಬುನಾದಿ ಮತ್ತು ಆತ್ಮವಿಶ್ವಾಸವನ್ನು ಮೂಡಿಸುವಂತಿರಬೇಕು. ಯಶಸ್ಸಿನ ಗುಣಗಳನ್ನು ಅಳವಡಿಸಿಕೊಂಡು ಉತ್ತಮ ಜೀವನವನ್ನು ರೂಪಿಸಿಕೊಳ್ಳುವಾಗ ಅಹಂ ಹತ್ತಿರ ಸುಳಿಯದಂತೆ ಹಗಲಿರುಳು ಶ್ರಮಿಸಿ ಯಶಸ್ಸಿನ ಮೆಟ್ಟಿಲೇರಬೇಕು. ವಿದ್ಯೆ ಎಂಬುದು ಯಾರ ಸ್ವತ್ತಲ್ಲ. ಶ್ರಮ, ಶ್ರದ್ಧೆ ಹಾಗೂ ಛಲವಿದ್ದರೆ ಏನೂ ಬೇಕಾದರೂ ಸಾಧಿಸಬಹುದು ಎಂದು ಹೇಳಿದರು.

ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಾದ ಕು. ಶಿವರಾಜ್ ಹಿರೇಮಠ ಹಾಗೂ ಕು. ಪೂರ್ವಶ್ರೀಗೆ ಚಾಮರಾಜನಗರದ ದೀನಬಂಧು ಸಂಸ್ಥೆಯ ಪ್ರೊ. ಜಿ.ಎಸ್. ಜಯದೇವ್, ಜೆಎಸ್‌ಎಸ್ ಕೆವಿಕೆಯ ನಿವೃತ್ತ ವಿಜ್ಞಾನಿಗಳಾದ ಶ್ರೀಮತಿ ಜಮುನಾ ಅರಸ್ ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ಜಿ. ಶಿವಮಲ್ಲುರವರು ನೀಡಿದ ನಗದು ಪುರಸ್ಕಾರವನ್ನು ವಿತರಿಸಲಾಯಿತು.

ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್ ರವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಸಂಸ್ಥೆಯ ಮುಖ್ಯಸ್ಥರುಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕ, ಶ್ರೀ ಸಂಪತ್ತು, ಶ್ರೀ ವೀರಭದ್ರಯ್ಯ, ಶ್ರೀ ಜಿ.ಶಿವಮಲ್ಲು, ಶ್ರೀ ಮ.ಗು. ಬಸವಣ್ಣ, ಶ್ರೀ ಜಿ.ಎಂ. ಷಡಕ್ಷರಿ, ಶ್ರೀಮತಿ ಪಿ. ಸುಶೀಲ, ಶ್ರೀ ಮಹದೇವಪ್ರಸಾದ್ ಮುಂತಾದವರು ಉಪಸ್ಥಿತರಿದ್ದರು.

ಶಾಲಾ ಮಕ್ಕಳು ಪ್ರಾರ್ಥಿಸಿದರು. ಶ್ರೀಮತಿ ಹೆಚ್.ಬಿ. ಕೃಪಾ ಸ್ವಾಗತಿಸಿದರು. ಶ್ರೀಮತಿ ಎಸ್. ಹೇಮಲತಾ ವಂದಿಸಿದರು. ಶ್ರೀಮತಿ ಎಸ್.ಸಿ. ಯಮುನಾ ನಿರೂಪಿಸಿದರು.

## ಬೀಳ್ಕೊಡುಗೆ ಎಂಬುದು ಅಂತ್ಯದ ಸಂಕೇತವಲ್ಲ, ಹೊಸದರ ಆರಂಭ



ಬೀಳ್ಕೊಡುಗೆ ಸಮಾರಂಭದಲ್ಲಿ ಪ್ರಾಂಶುಪಾಲರಾದ ಡಾ. ಎಂ ಪ್ರಭುರವರು ಮಾತನಾಡುತ್ತಿರುವುದು

**ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 17.7.2023ರಂದು ಅಂತಿಮ ವರ್ಷದ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಎಚ್.ಎಂ. ನಾಗಭೂಷಣ ಮಾತನಾಡಿ ಬೀಳ್ಕೊಡುಗೆ ನೀಡಿದ ತಕ್ಷಣ ಈ ಕಾಲೇಜಿಗೂ ನಿಮಗೂ ಯಾವುದೇ ಸಂಬಂಧವಿಲ್ಲವೆಂದಲ್ಲ, ಹಿರಿಯ ವಿದ್ಯಾರ್ಥಿನಿಯರ ಸಂಘದ ಸದಸ್ಯರಾಗಿ ಕಾಲೇಜಿನೊಂದಿಗೆ ನಿಮ್ಮ ಸಂಬಂಧ ಮುಂದುವರೆಯುತ್ತದೆ. ಪದವಿ ನಂತರ ಜೀವನ ರೂಪಿಸಿಕೊಳ್ಳಲು ಸರಿಯಾದ ಮಾರ್ಗವನ್ನು ಆಯ್ಕೆಮಾಡಿಕೊಂಡು ಉತ್ತಮ ಪ್ರಜೆಗಳಾಗಿ ಎಂದು ಹೇಳಿದರು.

ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಸ್. ಮಮತರವರು ನೀವೆಲ್ಲರು ಪ್ರಬುದ್ಧರಾಗಿದ್ದೀರಿ, ಜವಾಬ್ದಾರಿಗಳನ್ನು ನಿಭಾಯಿಸುವ ಸಾಮರ್ಥ್ಯ ನಿಮ್ಮಲ್ಲಿ ಬೆಳೆದಿರುವುದರಿಂದ ಮುಂದಿನ ನಿಮ್ಮ ವ್ಯಾಸಂಗ ಅಥವಾ ಔದ್ಯೋಗಿಕ ಬದುಕು ಹಸನಾಗಿರಲಿ ಎಂದು ಹಾರೈಸಿದರು.

ಪ್ರಾಂಶುಪಾಲರಾದ ಡಾ.ಎಂ ಪ್ರಭುರವರು ಸ್ಪರ್ಧಾತ್ಮಕ ತರಬೇತಿ ಘಟಕದಲ್ಲಿ ನಡೆಯುವ ತರಗತಿಗಳಿಗೆ ನೀವು ಪದವಿ ಮುಗಿದ ನಂತರವೂ ಆಗಮಿಸಿ, ಉದ್ಯೋಗ ಪಡೆದುಕೊಳ್ಳಲು ನಮ್ಮ ಕಾಲೇಜು ನಿಮಗಾಗಿ ತೆರೆದಿರುತ್ತದೆ. ನಮ್ಮಲ್ಲಿರುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ನಿಮ್ಮ ಭವಿಷ್ಯವನ್ನು ಉಜ್ವಲವಾಗಿಸಿಕೊಳ್ಳಿ ಎಂದು ತಿಳಿಸಿದರು.

ಸಮಾರಂಭದಲ್ಲಿ ಸಾಂಸ್ಕೃತಿಕ ಸಮಿತಿ ಸಂಚಾಲಕರಾದ ಶ್ರೀಮತಿ ಎನ್. ಭ್ರಮರಾಂಬ ಉಪಸ್ಥಿತರಿದ್ದರು.

ಗಾಳಿ ನೀರುಗಳನುಂಡವರು ಸದಾ ಸ್ಮಿತರಾಗಿ
ತಾಯೊಲ್ಮೆಯಿಂ ನೊಂದವರ ಕಂಬನಿಯನೊರಸಿ
ಭಗವದ್ವಿಭೂತಿ ಕಾಯಕಯೋಗಿ ಪರುಷಮಣಿ
ಪವಾಡವ ಮೆರೆದರ್ಗೆ ನಾಡಿಗೆ ಸುರಕ್ಷೆಯೆನೆ

ಶಿವನಂತೆ ಭಿಕ್ಷಾಟನಾಲೀಲೆಯಂ ಕೊಂಡು
ಹಿಮಗಿರಿಯವೋಲ್ ಬೆಳೆದ ರಾಜೇಂದ್ರಪ್ರಭು ನಮೋ!

– **ದೇಜಗೌ**

## ಕ್ಯಾಂಪಸ್ ಆಯ್ಕೆ

ಯಾರೊಂದಿಗೂ ಸ್ಪರ್ಧಾ ಮನೋಭಾವನೆ ಹೊಂದದೆ ತಮ್ಮದೆ ನಿಖರ ಗುರಿ ಹೊಂದಿ ಅದರೆಡೆಗೆ ನಿರಂತರ ಪ್ರಯತ್ನವಿದ್ದಲ್ಲಿ ಯಶಸ್ಸುಗಳಿಸಬಹುದಾಗಿದೆ ಎಂದು ಇಎಸ್‌ಎಎಫ್‌ನ ಟೀಮ್ ಲೀಡರ್ ಸುರೇಂದ್ರ ನಂಬಿಯಾರ್‌ರವರು ಹೇಳಿದರು.

**ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ಪ್ಲೇಸ್‌ಮೆಂಟ್ ಸೆಲ್ ವತಿಯಿಂದ ಆಯೋಜಿಸಿದ್ದ ಕ್ಯಾಂಪಸ್ ಆಯ್ಕೆ ಪ್ರಕ್ರಿಯೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸ್ಪರ್ಧೆಗಳಾಗಲಿ, ಉದ್ಯೋಗಮೇಳಗಳಾಗಲಿ ವಿದ್ಯಾರ್ಥಿಗಳಿಗೆ ಮೊದಲು ತಮ್ಮ ಸಾಮರ್ಥ್ಯದ ಬಗ್ಗೆ ಅರಿವಿರಬೇಕು. ಯಾವಾವ ಪರೀಕ್ಷೆಗಳಿಗೆ ಅಥವಾ ಆಯ್ಕೆ ಪ್ರಕ್ರಿಯೆಗಳಿಗೆ ಹೇಗೆ ಸಿದ್ಧತೆ ಮಾಡಿಕೊಳ್ಳಬೇಕು ಹಾಗೂ ಯಶಸ್ಸಿನತ್ತ ದಾಪುಗಾಲು ಇಡಲು ಪೂರ್ವ ನಿಯೋಜಿತದಂತೆ ತಯ್ಯಾರಿ ಹೊಂದುವ ಹವ್ಯಾಸ ಬೆಳೆಸಿಕೊಂಡಲ್ಲಿ ಯಶಸ್ಸು ಮರೀಚಿಕೆಯಾಗದು ಎಂದು ತಿಳಿಸಿದರು.

ಶ್ರೀ ಹೆಚ್.ಜಿ. ನಟರಾಜನ್ ಮಾತನಾಡಿ ಜೀವನದಲ್ಲಿ ಸೋಲುವುದು ಅವಮಾನವಲ್ಲ, ಸಣ್ಣಗುರಿ ಹೊಂದುವುದು ಅಪರಾಧ ಎಂಬ ಸಾರ್ವಕಾಲಿಕ ಸತ್ಯವನ್ನು ವಿದ್ಯಾರ್ಥಿಗಳು ಅರಿಯಬೇಕು. ಜೀವನದಲ್ಲಿ ಗುರು ಅತ್ಯವಶ್ಯಕ. ಅದಕ್ಕಿಂತಲೂ ಮುಖ್ಯ ಗುರಿ. ಅದನ್ನು ತಲುಪಲು ಮುಂದಿರುವ ದಾರಿಗಳು ಬಲವಾದ ನೂರು ಕೈಗಳಿಗಿಂತ ಚುರುಕಾದ ಒಂದು ಮಿದುಳು ಶ್ರೇಷ್ಠ ಎಂಬಂತೆ ಕೌಶಲ್ಯ ಸಹಿತ ಬುದ್ಧಿ ಶಕ್ತಿಯಿರಬೇಕು. ನಮ್ಮಲ್ಲಿ ಅಡಗಿರುವ ಎಲ್ಲ ಸುಪ್ತಶಕ್ತಿಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಿಕೊಂಡು ಯಶಸ್ಸಿನ ಒಂದೊಂದೇ ಮೆಟ್ಟಿಲಿನಿಂದ ಶಿಖರವೇರಬೇಕು ಎಂದು ಹೇಳಿದರು.

ಹೆಚ್.ಆರ್. ಟೆಕ್ನೋಟಾಸ್ಕ್‌ನ ಶ್ರೀಮತಿ ಮೊನಿಕಾ ವೀರ್‌ರವರು ವಿದ್ಯಾರ್ಥಿನಿಯರಿಗೆ ಪದವಿ ನಂತರದ ಅವಕಾಶಗಳ ಬಗ್ಗೆ ತಿಳಿಸಿಕೊಟ್ಟರು. ವೇದಿಕೆಯಲ್ಲಿ ಶ್ರೀ ಹೆಚ್.ಸಿ. ಮಹೇಶ್ ಹಾಗೂ ಶ್ರೀ ಗಿರೀಶ್ ಉಪಸ್ಥಿತರಿದ್ದರು. ಕ್ಯಾಂಪಸ್ ಆಯ್ಕೆ ಪ್ರಕ್ರಿಯೆಯಲ್ಲಿ ಕಾಲೇಜಿನ 7 ಜನ ವಿದ್ಯಾರ್ಥಿನಿಯರು ಆಯ್ಕೆಯಾದರು.

## ಶಾಲೆಗೆ ಕೊಡುಗೆ




**ಕೊಡಸೋಗೆ ಜೆಎಸ್‌ಎಸ್ ಪ್ರೌಢಶಾಲೆಗೆ** ದಿನಾಂಕ 22.6.2023 ರಂದು ಗುಂಡ್ಲುಪೇಟೆಯ ಕೈಲಾಶ ಸತ್ಯಾರ್ಥಿ ಮಕ್ಕಳ ಫೌಂಡೇಶನ್ ವತಿಯಿಂದ ತೊಂಬತ್ತು ಸಾವಿರ ರೂ. ಬೆಲೆ ಬಾಳುವ ಲ್ಯಾಪ್‌ಟಾಪ್, ಪ್ರೊಜೆಕ್ಟರ್, ಸ್ಪೀಕರ್, ಸ್ಕ್ರೀನ್‌ಗಳನ್ನು ಕೊಡುಗೆ ನೀಡಿದರು. ಈ ಸಂದರ್ಭದಲ್ಲಿ ಕೈಲಾಶ ಸತ್ಯಾರ್ಥಿ ಮಕ್ಕಳ ಫೌಂಡೇಶನ್ ಪ್ರತಿನಿಧಿ ಶ್ರೀಮತಿ ಭಾಗ್ಯರವರನ್ನು ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಶಾಲೆಯ ಪರವಾಗಿ ಸನ್ಮಾನಿಸಲಾಯಿತು. ಶಾಲಾ ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರು ಹಾಗೂ ಮಕ್ಕಳು ಹಾಜರಿದ್ದರು.

## ವಚನಗಳು ಜೀವನಕ್ಕೆ ದಾರಿದೀಪವಾಗಿವೆ

ವಚನಗಳು ಜೀವನಕ್ಕೆ ದಾರಿದೀಪವಾಗಿವೆ ಎಂದು ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಜಿ. ಶಿವಮಲ್ಲುರವರು ಅಭಿಪ್ರಾಯಪಟ್ಟರು.

**ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯಲ್ಲಿ** 20.7.2023ರಂದು ಮೈಸೂರಿನ ಶರಣು ವಿಶ್ವವಚನ ಫೌಂಡೇಶನ್ ಹಾಗೂ ವೈದ್ಯರಾದ ದಿವಂಗತ ಡಾ. ಮೃತ್ಯುಂಜಯಪ್ಪರವರ ದತ್ತಿಯ ಅಂಗವಾಗಿ ಆಯೋಜಿಸಿದ್ದ ಶಾಲೆಗಳೆಡೆಗೆ ವಚನಗಳ ನಡಿಗೆ ಎಂಬ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ವಚನ ಎಂಬುದು ಜೀವನಕ್ಕೆ ಒಂದು ಮಾದರಿ, ಪ್ರತಿಯೊಬ್ಬ ವಿದ್ಯಾರ್ಥಿಯು, ಪ್ರತಿ ದಿನ ಹತ್ತು ವಚನಗಳನ್ನಾದರೂ ಕಲಿತು ಹಾಡುವುದರ ಜೊತೆಗೆ ಅದರ ಮೌಲ್ಯಗಳನ್ನು ತಿಳಿದುಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಶರಣು ವಿಶ್ವವಚನ ಫೌಂಡೇಷನ್ನಿನ ಕೇಂದ್ರೀಯ ಸಂಚಾಲಕರಾದ ಶ್ರೀಮತಿ ಸುಧಾ ಮೃತ್ಯುಂಜಯಪ್ಪರವರು ಮಾತನಾಡಿ, ಸಮಾಜ ಸುಧಾರಕರಾದ ಬಸವಣ್ಣನವರ ವಚನಗಳ ಸಂದೇಶವನ್ನು ಜಗತ್ತಿಗೆ ಸಾರುವಂತಹ ಕೆಲಸವನ್ನು ರೂಪ ಕುಮಾರಸ್ವಾಮಿಯವರು ವಿಶ್ವ ವಚನ ಫೌಂಡೇಶನ್ ವತಿಯಿಂದ ಮಾಡುತ್ತಿದ್ದಾರೆ. ಇದರಲ್ಲಿ ವಿದ್ಯಾರ್ಥಿಗಳಾದ ನೀವು ವಚನಗಳ ಮಹತ್ವವನ್ನು ತಿಳಿದುಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಶರಣರ ವಚನಗಳು ಮನುಷ್ಯರ ಅಂತರಂಗ, ಬಹಿರಂಗ ಶುದ್ಧಿಮಾಡುವುದರ ಜೊತೆಗೆ ಜ್ಞಾನದ ಕಡೆಗೆ ಕೊಂಡೊಯ್ಯುತ್ತವೆ ಎಂದು ತಿಳಿಸಿದರು.

ನೂರಾರು ವಿದ್ಯಾರ್ಥಿಗಳು ವಚನ ಗಾಯನ ಮತ್ತು ವಚನಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಭಾಗವಹಿಸಿದ ಮತ್ತು ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಮತ್ತು ಪ್ರಮಾಣ ಪತ್ರವನ್ನು ಶರಣು ವಿಶ್ವವಚನ ಫೌಂಡೇಷನ್ನಿನ ಸಂಸ್ಥಾಪಕರಾದ ಶ್ರೀಮತಿ ರೂಪಕುಮಾರಸ್ವಾಮಿಯವರು ವಿತರಿಸಿ ಮಾತನಾಡಿ, ಹನ್ನೆರಡನೇ ಶತಮಾನದ ಶರಣರು ನಮಗೆ ಆದರ್ಶಪ್ರಾಯರಾಗಿದ್ದಾರೆ. ಇಂತಹ ಆದರ್ಶಗಳನ್ನಿಟ್ಟುಕೊಂಡು ನೀವು ಆದರ್ಶರಾಗಿ ಬಾಳಿ ಎಂದು ತಿಳಿಸಿದರು.

ಜೆಎಸ್‌ಎಸ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಮ.ಗು. ಬಸವಣ್ಣನವರು, ವಚನಗಳಲ್ಲಿ ಹೇಳಿರುವ ಪ್ರತಿಯೊಂದು ವಿಷಯವನ್ನು ಅರ್ಥಮಾಡಿಕೊಂಡು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜೆಎಸ್‌ಎಸ್ ಸಂಸ್ಥೆಗಳಲ್ಲಿ 50 ವರ್ಷ ಕರ್ತವ್ಯ ನಿರ್ವಹಿಸಿರುವ ಮುಖ್ಯೋಪಾಧ್ಯಾಯರಾದ ಶ್ರೀ ಜಿ.ಶಿವಮಲ್ಲುರವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಜೆಎಸ್‌ಎಸ್ ಸಂಸ್ಥೆಗಳ ಸಹಾಯಕ ಸಂಯೋಜನಾಧಿಕಾರಿಗಳಾದ ಶ್ರೀ ವೀರಭದ್ರಯ್ಯ, ವಿಶ್ವವಚನ ಫೌಂಡೇಶನ್ ಅಧ್ಯಕ್ಷರಾದ ಶ್ರೀ ಅನಿಲ್‌ಕುಮಾರ್ ವಾಜಂತ್ರಿ, ಶ್ರೀ ಉಮಾಪತಿ, ಶ್ರೀ ಲಿಂಗಣ್ಣ ಮೊದಲಾದವರು ಉಪಸ್ಥಿತರಿದ್ದರು.

ಶಾಲಾ ಮಕ್ಕಳು ಪ್ರಾರ್ಥಿಸಿದರು. ಶಿಕ್ಷಕರಾದ ಶ್ರೀ ಹೆಚ್.ಎಂ. ದಯಾನಂದಸ್ವಾಮಿ ಸ್ವಾಗತಿಸಿ, ನಿರೂಪಿಸಿದರು.

ಲೋಕವಿಕೃತ ಶ್ರೀ ಮಹಾ ಸು
ತ್ತೂರು ವೀರಪರಂಪರೆಗೆ ತೊಳ
ತೊಳದ ಕಳಸವನೇರಿಸಿದ ಶಿವರಾತ್ರಿ ರಾಜೇಂದ್ರ
ಪ್ರಭುವೆ, ಕಾಯಕ ತನುವ ಧರಿಸಿದ
ತೆರದಿ ಮೆರೆದಿರಿ! ನಿಮಗೆ ಹೋಲಿಕೆ
ಯಾರು, ಯೋಗಿಯೇ? ನಿಮ್ಮ ಪದಪಂಕೇರುಹಕೆ ಶರಣು

– **ಕೃಷ್ಣಕುಮಾರ್** ಸಿ.ಪಿ.

## ಪ್ರತಿಭಾನ್ವೇಷಣೆ – 2023



2023–24ನೇ ಶೈಕ್ಷಣಿಕ ಸಾಲಿನ ಪ್ರತಿಭಾನ್ವೇಷಣಾ ಕಾರ್ಯಕ್ರಮವನ್ನು ಕಾಲೇಜಿನ ಹಿರಿಯ ವಿದ್ಯಾರ್ಥಿನಿಯಾದ ಕು. ಜೆ.ಪಿ. ಸುಷ್ಮ ಉದ್ಘಾಟಿಸಿದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ** ದಿನಾಂಕ 27.7.2023ರಂದು 2023–24ನೇ ಸಾಲಿನ ಪ್ರತಿಭಾನ್ವೇಷಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾಲೇಜಿನ ಹಿರಿಯ ವಿದ್ಯಾರ್ಥಿನಿ ಹಾಗೂ ಗುಬ್ಬಿ ತಾಲ್ಲೂಕು ಖಜಾನೆ ಇಲಾಖೆಯ ಸಹಾಯಕ ನಿರ್ದೇಶಕರಾದ ಕು. ಜೆ.ಪಿ. ಸುಷ್ಮರವರು ಮಾತನಾಡುತ್ತಾ ಮೊಬೈಲನ್ನು ತಲೆ ತಗ್ಗಿಸಿ ನೋಡಿದರೆ ಮತ್ತೆ ತಲೆ ಎತ್ತದಂತೆ ಮಾಡುತ್ತದೆ. ಆದರೆ ಪುಸ್ತಕವನ್ನು ತಲೆ ತಗ್ಗಿಸಿ ನೋಡಿದರೆ ನಮ್ಮನ್ನು ತಲೆ ಎತ್ತುವಂತೆ ಮಾಡುತ್ತದೆ. ನಮಗೆ ಕಾಲೇಜಿನ ಗ್ರಂಥಾಲಯದಲ್ಲಿ ಸಂಜೆಯವರೆಗೆ ಅಧ್ಯಯನ ಮಾಡಲು ಪ್ರಾಂಶುಪಾಲರು ವಿಶೇಷ ಅನುಮತಿಯನ್ನು ನೀಡಿದ್ದರು. ಇದರಿಂದ ನನಗೆ ತುಂಬಾ ಉಪಯುಕ್ತವಾಯಿತು. ಈ ಕಾಲೇಜು ವಿದ್ಯಾರ್ಥಿಗಳಿಗೆ ಶಿಕ್ಷಣ ಮಾತ್ರವಲ್ಲದೆ ಮಾನವೀಯ ಮೌಲ್ಯಗಳನ್ನು ಕಲಿಸುವ ದೇಗುಲದಂತಿದೆ. ಇಂತಹ ವಿದ್ಯಾ ಕೇಂದ್ರದಲ್ಲಿ ಶಿಕ್ಷಣ ಪಡೆಯುತ್ತಿರುವ ನೀವು ಧನ್ಯರು ಎಂದು ಪ್ರೇರಣದಾಯಕ ನುಡಿಗಳನ್ನಾಡಿದರು.

ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿ ಮಾತನಾಡಿದರು. ಪ್ರಾಂಶುಪಾಲರಾದ ಶ್ರೀಮತಿ ಎಂ.ಪಿ. ರಾಜೇಶ್ವರಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ. ಪೂರ್ಣಿಮಾರವರು ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಪೋಷಕರು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಕು. ಪಿ.ಎಸ್. ಸೃಷ್ಟಿಪ್ರಸಾದ್ ಪ್ರಾರ್ಥಿಸಿದರು. ಶ್ರೀಮತಿ ಎಂ.ಎಸ್. ರಶ್ಮಿ ಸ್ವಾಗತಿಸಿದರು. ಶ್ರೀಮತಿ ಎಂ.ಆರ್. ಪ್ರತಿಮಾ ವಂದಿಸಿದರು. ಶ್ರೀಮತಿ ವೈ.ಎಸ್. ಶ್ವೇತಾ ಕಾರ್ಯಕ್ರಮ ನಿರೂಪಿಸಿದರು.

## ಕ್ರೀಡಾ ಸ್ಪರ್ಧಿಗಳಿಗೆ ಮತ್ತು ಸಾಂಸ್ಕೃತಿಕ ಕಲಾವಿದರಿಗೆ ಪ್ರೋತ್ಸಾಹ ಬೇಕು

– ಪ್ರೊ. ಎಸ್.ಎನ್. ಹೆಗ್ಡೆ




ಕ್ರೀಡೆ ಮತ್ತು ಸಾಂಸ್ಕೃತಿಕ ಪ್ರತಿಭೆ ಎಲ್ಲರಲ್ಲೂ ಇರುವುದಿಲ್ಲ. ಯಾರಿಗೆ ಯಾವುದರಲ್ಲಿ ಆಸಕ್ತಿಯಿದೆ ಎಂಬುದನ್ನು ಗುರುತಿಸಿ ಅಂಥವರನ್ನು ಪ್ರೋತ್ಸಾಹಿಸಬೇಕು. ಈ ಕೆಲಸವನ್ನು ಅಧ್ಯಾಪಕರು ಮಾಡಬೇಕು. ಕ್ರೀಡಾ ಸ್ಪರ್ಧಿಗಳಿಗೆ ಮತ್ತು ಸಾಂಸ್ಕೃತಿಕ ಕಲಾವಿದರಿಗೆ ಪ್ರೋತ್ಸಾಹ ಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಎಸ್.ಎನ್. ಹೆಗ್ಡೆ ಅವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ಪದವಿ ವಿಭಾಗದ ವತಿಯಿಂದ ಏರ್ಪಡಿಸಿದ್ದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು. ಕಾಲೇಜಿನಲ್ಲಿ ಲಲಿತಕಲಾ ವಿಭಾಗವೊಂದನ್ನು ತೆರೆಯಬೇಕು. ಏಕೆಂದರೆ ಕ್ರೀಡಾ ಸ್ಪರ್ಧಿಗಳಿಗೆ ಮತ್ತು ಸಾಂಸ್ಕೃತಿಕ ಕಲಾವಿದರಿಗೆ ಪ್ರೋತ್ಸಾಹ ಬೇಕಾಗುತ್ತದೆ. ದೇಶಕ್ಕೆ ವಿಜ್ಞಾನಿಗಳು, ವಾಣಿಜ್ಯೋದ್ಯಮಿಗಳು, ವೈದ್ಯರು, ಲಾಯರುಗಳು ಬೇಕಾಗಿರುವಂತೆಯೇ ಕವಿಗಳು, ಕಲಾವಿದರು, ಕ್ರೀಡಾಪಟುಗಳೂ ಬೇಕಾಗಿದ್ದಾರೆ. ಭಾರತೀಯರು ಯಾವುದಕ್ಕೂ ಕಡಿಮೆಯಿಲ್ಲ. ವಿಜ್ಞಾನ, ತಂತ್ರಜ್ಞಾನ, ಸಾಂಸ್ಕೃತಿಕ ಕಲೆಗಳಲ್ಲಿ ಉತ್ತಮರಾಗಿದ್ದಾರೆ. ರವೀಂದ್ರನಾಥ ಟ್ಯಾಗೋರ್ ಮತ್ತು ಸರ್.ಸಿ.ವಿ. ರಾಮನ್ ಅವರು ನಮ್ಮ ದೇಶಕ್ಕೆ ನೊಬೆಲ್ ಪ್ರಶಸ್ತಿಯನ್ನು ತಂದು ಕೊಟ್ಟಿದ್ದಾರೆ. ಆದ್ದರಿಂದ ಯುವಕರಿಗೆ, ಯುವಶಕ್ತಿಯ ಪ್ರತಿಭೆಗೆ ಪ್ರೋತ್ಸಾಹ ಬೇಕು. ಆಗ ಮಾತ್ರ ಪ್ರತಿಭೆ ಪ್ರಕಾಶಿಸುತ್ತದೆ. ವಿದ್ಯಾರ್ಥಿಗಳಿಗೆ ಪಠ್ಯದಷ್ಟೇ ಕ್ರೀಡೆಯೂ ಮುಖ್ಯ. ಇಂದು ಓದಿನಲ್ಲಿ, ಕ್ರೀಡೆಗಳಲ್ಲಿ ಸವಾಲುಗಳು ಮತ್ತು ಸ್ಪರ್ಧೆಗಳು ಬಹಳ ಇವೆ. ಸವಾಲುಗಳನ್ನು ಸ್ವೀಕರಿಸುವ ಮನೋಭಾವ ಕ್ರೀಡೆಯಿಂದ ಮಾತ್ರ ಸಿಗುತ್ತದೆ. ಅನೇಕರು ಹಿಮಾಲಯವನ್ನು ಕಷ್ಟಪಟ್ಟು ಹತ್ತಲು ಮುಖ್ಯ ಕಾರಣ ಅವರಲ್ಲಿ ಇರುವ ಸವಾಲನ್ನು ಎದುರಿಸುವ ಗುಣವೇ ಆಗಿರುತ್ತದೆ. ಕ್ರೀಡೆಯಿಂದ ದೈಹಿಕ ಮತ್ತು ಮಾನಸಿಕ ದೃಢತೆ ಉಂಟಾಗುತ್ತದೆ. ಒತ್ತಡದಿಂದ ಮುಕ್ತರಾಗಲು ಮಾತ್ರವಲ್ಲದೆ, ನಮ್ಮ ಮುಂದಿನ ಆರೋಗ್ಯದ ಜೀವನಕ್ಕೂ ಕಾರಣವಾಗುತ್ತದೆ. ಪಠ್ಯ ಮತ್ತು ಓದು ನಮಗೆ ವೃತ್ತಿಯನ್ನು ಕಲ್ಪಿಸಬಹುದಾದರೂ ವ್ಯಕ್ತಿಗೆ ಪ್ರವೃತ್ತಿಯೂ ಅಷ್ಟೇ ಮುಖ್ಯ. ಅಮೇರಿಕಾದಂತಹ ರಾಷ್ಟ್ರದಲ್ಲಿ ವೃತ್ತಿಗಿಂತ ಪ್ರವೃತ್ತಿಗೆ ಪ್ರಾಮುಖ್ಯವನ್ನು ನೀಡುತ್ತಾರೆ. ಪ್ರವೃತ್ತಿಯನ್ನೇ ನಂಬಿ ಅದರಲ್ಲೇ ಸಾಧನೆ ಮಾಡಿದವರು ಬಹಳ ಜನ ಇದ್ದಾರೆ. ದೌರ್ಬಲ್ಯಗಳು ಎಲ್ಲರಲ್ಲೂ ಇರುತ್ತದೆ. ಅದನ್ನು ಮೀರಿ ಸಾಧಿಸುವ ಗುರಿ ವಿದ್ಯಾರ್ಥಿಗಳಲ್ಲಿ ಇರಬೇಕು ಎಂದು ಹೇಳಿದರು.

ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡಿ ಶಿಕ್ಷಣ ಸಂಸ್ಥೆ ಕೇವಲ

ಪದವಿ ನೀಡುವ ಕಾರ್ಖಾನೆಗಳಾಗದೆ ಅವರ ವ್ಯಕ್ತಿತ್ವವನ್ನೂ ನಿರ್ಮಿಸುವಲ್ಲಿ ಸಫಲವಾಗಬೇಕು. ಅದಕ್ಕಾಗಿ ಪಠ್ಯ ಮತ್ತು ಪಠ್ಯಪೂರಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗುವಂತೆ ಮಾಡಬೇಕು. ನಮ್ಮ ಕಾಲೇಜಿನಲ್ಲಿಯೂ ಕ್ರೀಡಾ ಮತ್ತು ಸಾಂಸ್ಕೃತಿಕ ವೇದಿಕೆಗಳನ್ನು ನಿರ್ಮಿಸಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸುವ, ಪ್ರೋತ್ಸಾಹಿಸುವ ಕೆಲಸವನ್ನು ಮಾಡಲಾಗುತ್ತಿದೆ. ಕೌಶಲ್ಯಾಧಾರಿತ ಶಿಕ್ಷಣಕ್ಕೆ ಇಂದು ಹೆಚ್ಚು ಬೇಡಿಕೆ ಇರುವುದರಿಂದ ಶಿಕ್ಷಣದ ಜೊತೆಗೆ ಕೌಶಲ್ಯದ ಕಡೆಗೆ ಹೆಚ್ಚು ಗಮನ ನೀಡಬೇಕು. ಯಾವುದೇ ಸ್ಪರ್ಧೆಗಳಲ್ಲಿ ಭಾಗವಹಿಸುವಿಕೆ ಮುಖ್ಯವೇ ಹೊರತು ಬಹುಮಾನ ಗಳಿಸುವುದಲ್ಲ. ಬಹುಮಾನ ಕೆಲವರಿಗೇ ದೊರೆತರೂ ಭಾಗವಹಿಸಿದವರೆಲ್ಲಾ ವಿಜೇತರೇ ಆಗಿದ್ದಾರೆ ಎಂದು ತಿಳಿಸಿದರು.

ಕಾಲೇಜಿನ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಗಣ್ಯರು ಬಹುಮಾನವನ್ನು ವಿತರಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ.ಪಿ. ವಿಜಯೇಂದ್ರಕುಮಾರ್, ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾದ ಡಾ. ಸಿ.ಆರ್. ಮಧುಸೂದನ್, ಕ್ರೀಡಾ ವೇದಿಕೆಯ ಸಂಚಾಲಕರಾದ ಶ್ರೀ. ಎಂ. ಕಾರ್ತಿಕ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಕು. ನಿರಂಜಿನಿ ಭಾರ್ಗವ್ ಪ್ರಾರ್ಥಿಸಿದರು, ಕು. ಆರ್.ವಿ. ಅನನ್ಯ ಸ್ವಾಗತಿಸಿದರು. ಕು. ಅನೂಷ ವಂದಿಸಿದರು. ಕು. ಬಿ.ಎಂ. ಅಕ್ಷಯ್ ನಿರೂಪಿಸಿದರು.

## ಸಾಂಸ್ಕೃತಿಕ, ಸಾಹಿತ್ಯಕ, ಕ್ರೀಡಾ ವೇದಿಕೆಗಳ ಉದ್ಘಾಟನೆ

### ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಸರಸ್ವತಿಪುರಂ, ಮೈಸೂರು



**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ** ದಿನಾಂಕ 18.7.2023 ರಂದು 2023–24ನೇ ಸಾಲಿನ ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ವಿಶ್ರಾಂತ ಮುಖ್ಯ ಅಭಿಯಂತರರಾದ ಶ್ರೀ ಶಂಕರ ದೇವನೂರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದರು. ಹೆಚ್ಚುವರಿ ಪ್ರಾದೇಶಿಕ ಆಯುಕ್ತರಾದ ಶ್ರೀ ಪಿ. ಶಿವರಾಜು ಅಧ್ಯಕ್ಷತೆಯನ್ನು ವಹಿಸಿದ್ದರು. ಅಂತಾರಾಷ್ಟ್ರೀಯ ಹಾಕಿ ಕ್ರೀಡಾಪಟು ಶ್ರೀಮತಿ ನಿಲನ್ ಪೂಣಚ್ಚ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪ್ರಾಂಶುಪಾಲರು, ಸಂಚಾಲಕರು, ಬೋಧಕರು, ಬೋಧಕೇತರರು ಹಾಗೂ ವಿದ್ಯಾರ್ಥಿನಿಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಯಳಂದೂರು



ದಿನಾಂಕ 27.07.2023ರಂದು **ಯಳಂದೂರಿನ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ** 2023–24ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆ ಮತ್ತು ಹಿರಿಯರಿಂದ ಕಿರಿಯರಿಗೆ ಸ್ವಾಗತ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆಯನ್ನು ನೆರವೇರಿಸಿದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಂಶುಪಾಲರಾದ ಶ್ರೀ ಪಿ. ಮಹಾದೇವಸ್ವಾಮಿಯವರು ಮಾತನಾಡುತ್ತಾ ನಾನೂ ಕೂಡ ಜೆಎಸ್‌ಎಸ್ ಸಂಸ್ಥೆಯ ವಿದ್ಯಾರ್ಥಿಯಾಗಿದ್ದು, ಈ ಸಂಸ್ಥೆ ಶಿಸ್ತಿಗೆ ಪ್ರಾಧಾನ್ಯತೆ ನೀಡುತ್ತದೆ. ವಿದ್ಯಾರ್ಥಿಗಳು ಯಾವುದೇ ಕೆಲಸವನ್ನು ಕ್ಷಣಿಕಕ್ಕೋಸ್ಕರ ಮಾಡದೆ ಭವಿಷ್ಯದ ಒಳಿತಿಗಾಗಿ ಮಾಡಬೇಕು. ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಮತ್ತು ಕ್ರೀಡೆಗಳಲ್ಲಿ ಭಾಗವಹಿಸುವ ಜೊತೆಗೆ ಚೆನ್ನಾಗಿ ಓದಬೇಕು. ನಮ್ಮ ಕೆಲಸ ಎಲ್ಲರಿಗೂ ಗೊತ್ತಾಗುವಂತೆ ಇರಬೇಕು, ಆದರೆ ನಾವು ಯಾರು ಅಂತ ಗೊತ್ತಾಗಬಾರದು ಎಂದು ತಿಳಿಸಿದರು.

ಯಳಂದೂರಿನ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎನ್. ಎಂ. ಚಂದ್ರಕುಮಾರ್, ಜೆಎಸ್‌ಎಸ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ವಿ. ಚಂದ್ರಕಲಾ ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಚ್. ಎಸ್. ಚಂದ್ರಶೇಖರ ಅಧ್ಯಕ್ಷತೆಯನ್ನು ವಹಿಸಿದ್ದರು. ಕು. ಭೂಮಿಕ ಮತ್ತು ತಂಡದವರು ಪ್ರಾರ್ಥನೆ ಮಾಡಿದರು. ಕು. ಎಂ. ಸಿಂಚನ ಸ್ವಾಗತಿಸಿದರು. ಕು. ಇಂದ್ರಾದೇವಿಯವರು ವಂದಿಸಿದರು. ಕು. ಎನ್. ತ್ರಿವೇಣಿ ಕಾರ್ಯಕ್ರಮ ನಿರೂಪಿಸಿದರು. ಅಧ್ಯಾಪಕ ಅಧ್ಯಾಪಕೇತರ ವರ್ಗದವರು ಹಾಗೂ ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮಮಕಾರದಳಿಸಿಕೆಯೆ ಶಿವಭಕ್ತಿಪಾರಮ್ಯ;
ಕಾರುಣ್ಯದಪ್ಪುಗೆಯೆ ನಿಜ ಸಾಮರಸ್ಯ.
ಈ ಭಾವಮಡಿಯಿಂದ ಮನುಜಮನ ಪಾವಿತ್ರ್ಯ;
ರಾಜೇಂದ್ರ ನೆನಪೊಂದು ಸ್ಫೂರ್ತಿ ಸಂದೇಶ.

**– ಶಿವಪ್ಪ ಕೆ.ಸಿ.**

## ತರಕಾರಿ ಬೆಳೆಗಳಲ್ಲಿ ಸಮಗ್ರ ಸಸ್ಯ ಸಂರಕ್ಷಣೆ ತರಬೇತಿ

**ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ** ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಸಹಯೋಗದೊಂದಿಗೆ ದಿನಾಂಕ 24.7.2023ರಂದು ಹರತಲೆ ಗ್ರಾಮದಲ್ಲಿ ಸಸ್ಯ ಸಂರಕ್ಷಣೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ತೋಟಗಾರಿಕಾ ವಿಜ್ಞಾನಿಗಳಾದ ಡಾ. ಜಿ.ಎಮ್. ವಿನಯ್ ಮಾತನಾಡಿ ತರಕಾರಿ ಬೆಳೆಗಳಲ್ಲಿ ಪ್ರಮುಖವಾಗಿ ಟೊಮ್ಯಾಟೋ ಮತ್ತು ಮೆಣಸಿನಕಾಯಿಯಲ್ಲಿ ಪೋಷಕಾಂಶಗಳ ನಿರ್ವಹಣೆ, ತರಕಾರಿ ಸಮೃದ್ಧಿಯ ಬಳಕೆ ಹಾಗೂ ಸಮಗ್ರ ಲಘು ಪೋಷಕಾಂಶಗಳ ಉಪಯೋಗಗಳನ್ನು ತಿಳಿಸಿಕೊಟ್ಟರು.

ಸಸ್ಯ ಸಂರಕ್ಷಣೆ ವಿಜ್ಞಾನಿ ಡಾ. ವೈ.ಪಿ. ಪ್ರಸಾದ್ ಮಾತನಾಡಿ ಮಳೆಗಾಲದಲ್ಲಿ ತರಕಾರಿ ಬೆಳೆಗಳಿಗೆ ಬರುವ ರೋಗಗಳಾದ ಮೊದಲ ಅಂಗಮಾರಿ, ಕೊನೆಯ ಅಂಗಮಾರಿ, ಸಸಿ ಕೊಳೆ, ದುಂಡಾಣು ಎಲೆ ಚುಕ್ಕೆ, ಸೊರಗು, ಎಲೆ ಮುಟುರು ಮತ್ತು ಚಿಬ್ಬು ರೋಗಗಳ ಗುಣಲಕ್ಷಣಗಳು ಹಾಗೂ ಅವುಗಳ ಸಮಗ್ರ ನಿರ್ವಹಣೆಯನ್ನು ವಿವರಿಸಿದರು.

ನಂಜನಗೂಡಿನ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಬಿ.ಸಿ ಟ್ರಸ್ಟ್ ಕೃಷಿ ಅಧಿಕಾರಿ ಜಯಪಾಲ್ ಮಾತನಾಡಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯಲ್ಲಿ ದೊರೆಯುವ ಸೌಲಭ್ಯಗಳ ಬಗ್ಗೆ ಮತ್ತು ಕೃಷಿಯಲ್ಲಿ ಯಂತ್ರಗಳ ಸದ್ಬಳಕೆಯ ಕುರಿತು ನೆರೆದಂತಹ ರೈತರಿಗೆ ತಿಳಿಸಿಕೊಟ್ಟರು. ಕಾರ್ಯಕ್ರಮದ ಕೊನೆಯಲ್ಲಿ ತಂತ್ರಜ್ಞಾನ ಪರಿಶೀಲನೆಯಡಿಯಲ್ಲಿ ಆಯ್ದ ರೈತರಿಗೆ ಸಸ್ಯ ಸಂರಕ್ಷಣಾ ಪರಿಕರಗಳನ್ನು ನೀಡಲಾಯಿತು. ಈ ತರಬೇತಿ ಕಾರ್ಯಕ್ರಮದಲ್ಲಿ ಹರತಲೆ ಗ್ರಾಮದ ರಾಜು, ಲೋಕೇಶ್ ಹಾಗೂ ಸುಮಾರು 30ಕ್ಕೂ ಹೆಚ್ಚು ರೈತರು ಭಾಗವಹಿಸಿ ಉಪಯೋಗ ಪಡೆದುಕೊಂಡರು.



ಅಮೆರಿಕಾದಲ್ಲಿ ನೆಲೆಸಿರುವ ಶ್ರೀಮಠದ ಭಕ್ತರಾದ ಶ್ರೀಮತಿ ಉಮಾ ಇಟ್ಟಗಿಯವರು ತಮ್ಮ ತಂದೆಯವರಾದ ಶ್ರೀ ಶಿವಬಸಪ್ಪ ಅವರ 33ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಸುತ್ತೂರು ವಸತಿ ಶಾಲೆಯ ಮಕ್ಕಳಿಗೆ ವಿಶೇಷ ಪ್ರಸಾದವನ್ನು ಏರ್ಪಡಿಸಿದ್ದರು.

## ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರಿನ ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ವತಿಯಿಂದ **ಜೆಎಸ್‌ಎಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ,** ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಹಾಗೂ ಯೋಗ ಪ್ರಾಣ ವಿದ್ಯಾಕೇಂದ್ರ ಸಹಭಾಗಿತ್ವದೊಂದಿಗೆ ದಿನಾಂಕ 11.7.2023ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಶಿಬಿರದಲ್ಲಿ ಆಮ್ಲಪಿತ್ತ, ಚರ್ಮರೋಗ, ಕೆಮ್ಮು, ಬೆನ್ನುನೋವು, ಕುತ್ತಿಗೆನೋವು, ಉಸಿರಾಟದ ತೊಂದರೆ, ಕೀಲುನೋವು, ಮಂಡಿನೋವು, ಮಧುಮೇಹ ಖಾಯಿಲೆಗಳಿಗೆ ತಪಾಸಣೆ ಹಾಗೂ ಸಲಹೆಗಳನ್ನು ನೀಡಲಾಯಿತು.

ಶಿಬಿರಕ್ಕೆ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಿಂದ ಡಾ. ಬಿ.ಆರ್. ವೀಣಾ ಹಾಗೂ ಇಬ್ಬರು ಕಲಿಕಾ ವೈದ್ಯರನ್ನು ನಿಯೋಜಿಸಲಾಗಿತ್ತು. 34 ಜನರು ಉಚಿತ ತಪಾಸಣೆಯ ಸೌಲಭ್ಯವನ್ನು ಪಡೆದರು. □

* * *



**ಜೆಎಸ್‌ಎಸ್ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯು** ಕೌಮಾರಭೃತ್ಯ ಮತ್ತು ಮಾನಸ ರೋಗ ವಿಭಾಗದ ವತಿಯಿಂದ ಮೈಸೂರಿನ ಜೆಎಸ್‌ಎಸ್ ಸಹನಾ ಶಾಲೆಯ ಮಕ್ಕಳಿಗೆ 13.7.2023

ರಂದು ಆರೋಗ್ಯ ತಪಾಸಣಾ ಶಿಬಿರವನ್ನು ನಡೆಸಲಾಯಿತು.

ವಿವಿಧ ಹಂತಗಳ ಬೌದ್ಧಿಕ ಅಸಾಮರ್ಥ್ಯ, ಆಟಿಸಂ, ಡೌನ್ಸ್ ಸಿಂಡ್ರೋಮ್ ಮತ್ತು ಇತರೆ ಬೌದ್ಧಿಕ ವಿಕಲಚೇತನ ಮಕ್ಕಳ ತಪಾಸಣೆಯನ್ನು ಮಾಡಲಾಯಿತು. ಒಟ್ಟು 37 ಮಕ್ಕಳು ಈ ಶಿಬಿರದ ಪ್ರಯೋಜನವನ್ನು ಪಡೆದರು. ಈ ಮಕ್ಕಳಿಗೆ ಆಸ್ಪತ್ರೆಯಲ್ಲಿ ಮುಂದಿನ ಚಿಕಿತ್ಸೆಯನ್ನು ಪಡೆಯಲು ಸಲಹೆ ನೀಡಲಾಗಿದೆ.

ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಿಂದ ಡಾ. ಎಸ್. ಶ್ರೀಹರಿ, ಡಾ. ಹೆಚ್.ಎಮ್. ಪ್ರೀತಿ, ಡಾ. ಪಿ.ಎಂ. ಉನ್ನಿಕೃಷ್ಣ, ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಕಲಿಕಾ ವೈದ್ಯರನ್ನು ನಿಯೋಜಿಸಲಾಗಿತ್ತು. ಪ್ರಾಂಶುಪಾಲರಾದ ಶ್ರೀಮತಿ ಸರ್ವಮಂಗಳಮ್ಮ, ಸುಭಾಷ್ ಮತ್ತು ಶಾಲೆಯ ಇತರ ಶಿಕ್ಷಕರು ಉಪಸ್ಥಿತರಿದ್ದರು.

## ಸಾಫ್ಟ್‌ಬಾಲ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ




ದಿನಾಂಕ 15.7.2023ರಿಂದ 17.7.2023ರವರೆಗೆ ಹುಣಸೂರಿನ ಸರ್ಕಾರಿ ಮಹಿಳಾ ಕಾಲೇಜು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಸಂಯುಕ್ತ ಆಶ್ರಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಮಹಿಳಾ ಕ್ರೀಡಾಕೂಟದಲ್ಲಿ **ಕೊಳ್ಳೇಗಾಲದ ಜೆಎಸ್‌ಎಸ್ ಕಾಲೇಜಿನ** ವಿದ್ಯಾರ್ಥಿನಿಯರು ಸಾಫ್ಟ್‌ಬಾಲ್ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ. ಈ ವಿದ್ಯಾರ್ಥಿನಿಯರನ್ನು ಪ್ರಾಂಶುಪಾಲರಾದ ಡಾ. ಎಂ ಪ್ರಭು ಹಾಗೂ ಕ್ರೀಡಾ ಸಂಚಾಲಕರಾದ ಶ್ರೀ ಶ್ರೀಧರ್ ಮತ್ತು ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಅಭಿನಂದಿಸಿದ್ದಾರೆ.

**ಮಾಸಿಕ ಸಾಮೂಹಿಕ ವಿವಾಹ – 2023 ಸುತ್ತೂರು ಶ್ರೀಕ್ಷೇತ್ರ**

**ಸೆಪ್ಟೆಂಬರ್ 25, ಸೋಮವಾರ**

**ವಿವರಗಳಿಗೆ ಸಂಪರ್ಕಿಸಿ**

**ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು**

**ದೂರವಾಣಿ : 08221–232223, 232224**

## ಕುಸ್ತಿ ಪಂದ್ಯಾವಳಿಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ



ಮೈಸೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಹುಣಸೂರು ತಾಲ್ಲೂಕು ಕಲ್ಕುಣಿಕೆಯ **ಜೆಎಸ್‌ಎಸ್ ಪ್ರೌಢಶಾಲೆಯ** 8ನೇ ತರಗತಿ ವಿದ್ಯಾರ್ಥಿ ಕು. ಶ್ರೇಯಸ್‌ಕುಮಾರ್ ಜಿಲ್ಲಾಮಟ್ಟದ 52 ಕೆಜಿ ಕುಸ್ತಿಪಂದ್ಯಾವಳಿಯಲ್ಲಿ ವಿಜೇತರಾಗಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ರಮೇಶ್ ಮತ್ತು ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಕೆ.ಎಸ್. ಶಾಂತವೀರ ದೇವರು ಹಾಗೂ ಶಿಕ್ಷಕ ವೃಂದ ವಿದ್ಯಾರ್ಥಿಯನ್ನು ಅಭಿನಂದಿಸಿದ್ದಾರೆ.

## ಕುಸ್ತಿ ಪಂದ್ಯಾವಳಿ : ರಾಜ್ಯಮಟ್ಟಕ್ಕೆ ಆಯ್ಕೆ



ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ದಿನಾಂಕ 26.7.2023ರಂದು ಮೈಸೂರಿನ ಓವೆಲ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ **ಲಕ್ಷ್ಮೀಪುರಂ ಜೆಎಸ್‌ಎಸ್ ಪ್ರೌಢಶಾಲೆಯ** ಹತ್ತನೆಯ ತರಗತಿ ವಿದ್ಯಾರ್ಥಿಗಳಾದ ಕು. ಆದರ್ಶ ನಾಯಕ್ ಮತ್ತು ಕು. ಮಹದೇವಸ್ವಾಮಿ ಪ್ರಥಮ ಬಹುಮಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಮುಖ್ಯೋಪಾಧ್ಯಾಯರಾದ ಶ್ರೀ ಎಂ.ಸಿ. ದೇವರಾಜು ಹಾಗೂ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಎಂ.ಆರ್. ರವಿ ಅಭಿನಂದಿಸಿದ್ದಾರೆ.

## ಕರಾಟೆ : ಜಿಲ್ಲಾಮಟ್ಟಕ್ಕೆ ಆಯ್ಕೆ



ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ದಿನಾಂಕ 26.7.2023ರಂದು ಮೈಸೂರಿನ ಕಾವೇರಿ ಶಾಲೆಯಲ್ಲಿ ನಡೆದ ತಾಲ್ಲೂಕು ಮಟ್ಟದ ಅಂಡರ್–14 ವಿಭಾಗದ ಕರಾಟೆ ಸ್ಪರ್ಧೆಯಲ್ಲಿ ಲಕ್ಷ್ಮೀಪುರಂ **ಜೆಎಸ್‌ಎಸ್ ಪ್ರೌಢಶಾಲೆಯ** ಎಂಟನೆಯ ತರಗತಿ ವಿದ್ಯಾರ್ಥಿ ಕು. ಒ.ಎಸ್. ಅರ್ಜುನ್ ಪ್ರಥಮ ಬಹುಮಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

## ಬೆಳ್ಳಿ ಬೆಡಗು

### ಜೆಎಸ್‌ಎಸ್ ಪ್ರೌಢಶಾಲೆ, ದೇವಲಾಪುರ, ಮೈಸೂರು ತಾ.



ದೇವಲಾಪುರ ಮೈಸೂರು ತಾಲ್ಲೂಕಿನ ಒಂದು ಪ್ರಮುಖ ಗ್ರಾಮ. ಮೈಸೂರು ಹಾಗೂ ಸುತ್ತೂರು ರಸ್ತೆಯಲ್ಲಿ ಎರಡು ಪವಿತ್ರ ತಾಣಗಳ ನಡುವೆ ನೆಲೆಗೊಂಡಿರುವ ಈ ಊರಿಗೆ ಪೌರಾಣಿಕ ಹಿನ್ನೆಲೆಯೂ ಇದೆ. ದೇವಲ ಮಹರ್ಷಿಗಳು ತಪೋನಿರತರಾಗಿ ಸಾಧನೆಗೈದ ಪವಿತ್ರ ಭೂಮಿ ದೇವಲಾಪುರ.

ಈ **ದೇವಲಾಪುರದಲ್ಲಿ ಜೆಎಸ್‌ಎಸ್ ಪ್ರೌಢಶಾಲೆಯು** 1985 ನೇ ಇಸವಿಯಲ್ಲಿ ಮೈಸೂರಿನ ಚಾಮುಂಡಿ ಬೆಟ್ಟದ ಮೆಟ್ಟಿಲು ರಸ್ತೆಯಲ್ಲಿ ಆರಂಭಗೊಂಡಿತು. ಆ ನಂತರ ಜೆಎಸ್‌ಎಸ್ ಕಾಲೇಜು ಊಟಿ ರಸ್ತೆಯಲ್ಲಿರುವ ಕಟ್ಟಡಕ್ಕೆ ಸ್ಥಳಾಂತರಗೊಂಡಿತು.

2004ರವರೆಗೆ ಸುತ್ತಮುತ್ತಲಿನಲ್ಲಿ ವಾಸವಿದ್ದ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಹಾಗೂ ಗ್ರಾಮೀಣ ಪ್ರದೇಶದ ಮಕ್ಕಳಿಗೆ ವಿದ್ಯಾರ್ಥಿನಿಲಯ ಸೌಲಭ್ಯದೊಂದಿಗೆ ಶೈಕ್ಷಣಿಕ ಸೇವೆ ಸಲ್ಲಿಸಿದೆ.

ದೇವಲಾಪುರದ ಭಕ್ತರ ಆಕಾಂಕ್ಷೆಯ ಮೇರೆಗೆ 2004ರಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದ ಪದವಿಪೂರ್ವ ಕಾಲೇಜಿನ ಕಟ್ಟಡದಲ್ಲಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಿ ಪ್ರೌಢಶಾಲೆಯನ್ನು ಸ್ಥಳಾಂತರಿಸಲಾಯಿತು. ಶಾಲಾ ನಿವೇಶನವು ಸುಮಾರು ಎರಡು ಎಕರೆ ಇಪ್ಪತ್ತೇಳು ಗುಂಟೆಯ ವಿಶಾಲವಾದ ಮೈದಾನದಲ್ಲಿ ಪದವಿಪೂರ್ವ ಕಾಲೇಜಿನ ಜೊತೆಗೆ ಎರಡು ಅಂತಸ್ತಿನ ಕಟ್ಟಡ ಹೊಂದಿದೆ. ಕಟ್ಟಡದ ಉತ್ತರಕ್ಕೆ ಪಾರ್ಕ್ ನಿರ್ಮಿಸಲಾಗಿದ್ದು ದಕ್ಷಿಣಕ್ಕೆ ವಿವಿಧ ಆಟದ ಅಂಕಣಗಳನ್ನು ನಿರ್ಮಿಸಲಾಗಿದೆ. ಕಟ್ಟಡದ ನೆಲ ಅಂತಸ್ತಿನಲ್ಲಿ ಕಾಲೇಜಿನ ಪ್ರಾಂಶುಪಾಲರ ಕೊಠಡಿ, ಉಪನ್ಯಾಸಕರ ಕೊಠಡಿ, ಶಾಲೆಗೆ ಸಂಬಂಧಿಸಿದಂತೆ ಮುಖ್ಯಶಿಕ್ಷಕರ ಕೊಠಡಿ ಮತ್ತು ಕಛೇರಿ, ಶಿಕ್ಷಕರ ಕೊಠಡಿ, ಬಿಸಿಯೂಟದ ಅಡುಗೆ ಮನೆ ಮತ್ತು ಉಗ್ರಾಣ, 8, 9 ಮತ್ತು 10ನೆಯ ತರಗತಿಗಳು, ಕ್ರೀಡಾ ಮತ್ತು ಪ್ರಯೋಗ ಶಾಲೆ ಇವೆ.

ಮೊದಲನೇ ಮಹಡಿಯಲ್ಲಿ ಪದವಿಪೂರ್ವ ತರಗತಿಗಳು, ಗಣಕಯಂತ್ರ ಕೊಠಡಿ ಮತ್ತು ವಾಚನಾಲಯ ಸೇರಿದಂತೆ ಗ್ರಂಥಾಲಯ ಮತ್ತು ಸಭಾಂಗಣ ವ್ಯವಸ್ಥೆ ಇದೆ.

ಆರಂಭದಿಂದಲೂ ಉತ್ತಮ ಫಲಿತಾಂಶ ನೀಡುತ್ತಿರುವ ಈ ಶಾಲೆಯು ಪ್ರತಿ ವರ್ಷ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಾ ಸಾಗಿದೆ.

ಶಾಲೆಯು ಗ್ರಂಥಾಲಯ, ವಾಚನಾಲಯ, ಶೌಚಾಲಯ, ಕಂಪ್ಯೂಟರ್ ಶಿಕ್ಷಣ, ಸ್ಮಾರ್ಟ್ ಕ್ಲಾಸ್, ಆಟದ ಅಂಕಣಗಳು. ಕ್ರೀಡಾ ಸಾಮಾಗ್ರಿ, ಮುಂತಾದ ಸೌಲಭ್ಯಗಳ ಜೊತೆಗೆ ನುರಿತ ಬೋಧಕ ಮತ್ತು ಬೋಧಕೇತರ ವೃಂದವನ್ನು ಹೊಂದಿದೆ.

ಕಳೆದ 2021–22ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ 93.6% ಫಲಿತಾಂಶದ ಹಿರಿಮೆಯ ಗರಿಯನ್ನು ಹೊಂದಿದೆ. ಮುಂದಿನ ದಿನಗಳಲ್ಲಿ ಕ್ರೀಡೆ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಾಧನೆಗೈಯುವ ಉನ್ನತ ಗುರಿಯೊಂದಿಗೆ ಇಡೀ ಶಾಲೆಯ ನೌಕರವರ್ಗ ಕಂಕಣಬದ್ಧರಾಗಿ ಕ್ರಿಯಾಶೀಲರಾಗಿದ್ದಾರೆ.

## ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ




